# ಶ್ರೀರಾಮನಗರ ಪಟ್ಟಣ ಸಹಕಾರ ಬ್ಯಾಂಕ್ ನಿ.,

ಶ್ರೀರಾಮನಗರ-583282
ತಾ ಗಂಗಾವತಿ ಜಿ. ಕೊಪ್ಪಳ



## 27ನೇ ವಾರ್ಷಿಕ ವರದಿ 2022-23

# ಶ್ರೀರಾಮನಗರ ಪಟ್ಟಣ ಸಹಕಾರ ಬ್ಯಾಂಕ್ ನಿ.,

## ನಿರ್ದೇಶಕ ಮಂಡಲಿ



ಶ್ರೀ ಸಿ.ಹೆಚ್.ವಿ. ರಾಮಕೃಷ್ಣ
ಅಧ್ಯಕ್ಷರು



ಶ್ರೀಮತಿ ಆರ್ನೇ ರತ್ನಪ್ರಸನ್ನ
ಉಪಾಧ್ಯಕ್ಷರು



ಶ್ರೀ ಎ. ವೆಂಕಟರಾಜು
ನಿರ್ದೇಶಕರು



ಶ್ರೀ ಕೆ. ವೆಂಕಟರಾವ್
ನಿರ್ದೇಶಕರು



ಶ್ರೀ ರೆಡ್ಡಿ ಶ್ರೀನಿವಾಸ್
ನಿರ್ದೇಶಕರು



ಶ್ರೀ ಬಿ. ರಾಜಶೇಖರ್
ನಿರ್ದೇಶಕರು



ಶ್ರೀ ಓ. ಲಕ್ಷ್ಮೀನಾರಾಯಣ
ನಿರ್ದೇಶಕರು



ಶ್ರೀ ಎಂ. ಶ್ರೀನಿವಾಸ
ನಿರ್ದೇಶಕರು



ಶ್ರೀ ಕೆ. ಸಂಗನಬಸಪ್ಪ
ನಿರ್ದೇಶಕರು



ಶ್ರೀ ಕೆ. ನಾಗರಾಜ
ನಿರ್ದೇಶಕರು



ಶ್ರೀ ಕೆ. ಎ. ರಾಮಾರಾವ್
ನಿರ್ದೇಶಕರು



ಶ್ರೀ ಪಿ. ವೆಂಕಟಕೃಷ್ಣ
ನಿರ್ದೇಶಕರು



ಶ್ರೀ ಕೊಕ್ಕಿ ರಾಮಾಂಜನೇಯಲು
ನಿರ್ದೇಶಕರು



ಶ್ರೀ ನೀಲಕಂಠ
ನಿರ್ದೇಶಕರು



ಶ್ರೀಮತಿ ಬಿ. ಸಂಧ್ಯಾರಾಣಿ
ನಿರ್ದೇಶಕರು



ಶ್ರೀ ವೀರಬಸನಗೌಡ
ನಿರ್ದೇಶಕರು

ನೊಂದಣಿ ಸಂಖ್ಯೆ : ಸ.ನಿ. 14 ಎಸ್–4ಯುಬಿಸಿ 22927/95–96 ದಿನಾಂಕ : 08–09–1995

# ಶ್ರೀರಾಮನಗರ ಪಟ್ಟಣ ಸಹಕಾರ ಬ್ಯಾಂಕ್ ನಿ., ಶ್ರೀರಾಮನಗರ

ತಾ॥ ಗಂಗಾವತಿ. ಜಿ॥ ಕೊಪ್ಪಳ

## 2022–23ನೇ ಸಾಲಿನ
## ಸರ್ವ ಸದಸ್ಯರ ಮಹಾಸಭೆಯ ಆಹ್ವಾನ ಪತ್ರಿಕೆ

ಶ್ರೀರಾಮನಗರ
ದಿ. 10–08–2023

## ನೋಟೀಸು

ಸನ್ಮಾನ್ಯ ಸದಸ್ಯರೇ,

ನಮ್ಮ ಬ್ಯಾಂಕಿನ 2022–2023ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ 26–08–2023 ಶನಿವಾರ ಬೆಳಿಗ್ಗೆ 11–00 ಗಂಟೆಗೆ ಶ್ರೀರಾಮನಗರದ 6ನೇ ವಾರ್ಡಿನ, ಶ್ರೀ ವೆಂಕಟೇಶ್ವರ ದೇವಸ್ಥಾನದ ಸಮುದಾಯ ಭವನ (ಕಲ್ಯಾಣ ಮಂಟಪ)ದಲ್ಲಿ ಈ ಕೆಳಕಂಡ ವಿಷಯಗಳನ್ನು ಚರ್ಚಿಸಿ ನಿರ್ಣಯ ಕೈಕೊಳ್ಳಲು ಕರೆಯಲಾಗಿದೆ. ಕಾರಣ ತಾವುಗಳು ಸಕಾಲಕ್ಕೆ ಆಗಮಿಸಿ ಸಭೆಯನ್ನು ಯಶಸ್ವಿಗೊಳಿಸಬೇಕೆಂದು ವಿನಂತಿ.

### ಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳು

1. ಸಭೆಯ ನೋಟೀಸು ಓದಿ ದಾಖಲಿಸುವುದು.
2. ಹಿಂದಿನ ಸಾಮಾನ್ಯ ಸಭೆಯ ನಡವಳಿಕೆಯನ್ನು ಓದಿ ದೃಢೀಕರಿಸುವುದು.
3. 2022–23ನೇ ಸಾಲಿನ ಆಡಳಿತ ಮಂಡಲಿಯ ವಾರ್ಷಿಕ ವರದಿಯನ್ನು ಪರಿಶೀಲಿಸಿ ಅನುಮೋದಿಸುವುದು.
4. 2022–23ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ ಮತ್ತು ಮಂಡಲಿಯ ಅನುಪಾಲನಾ ವರದಿಯನ್ನು ಪರಿಶೀಲಿಸುವುದು.
5. ಸನ್ 2022–23ನೇ ಸಾಲಿನ ನಿವ್ವಳ ಲಾಭದ ವಿಲೇವಾರಿ,
6. 2023–24ನೇ ಸಾಲಿನ ಬಜೆಟ್‌ನ್ನು ಪರಿಶೀಲಿಸಿ ಅನುಮೋದಿಸುವುದು.
7. ನಿರ್ದಿಷ್ಟ ಮೀಸಲು ಮತ್ತು ಇತರೇ ನಿಧಿಗಳನ್ನು ಸೃಜಿಸುವುದು.
8. ಮಂಡಳಿಯ ಸದಸ್ಯರ ಮತ್ತು ಕಾರ್ಯನಿರ್ವಾಹಕನ ಸಂಬಂಧಿಗಳು ಸಿಬ್ಬಂದಿಗಳಾಗಿ ನೇಮಕವಾಗಿದ್ದರೆ ಅಂಥ ಸಿಬ್ಬಂದಿಗಳ ಪಟ್ಟಿಯ ಪರಿಶೀಲನೆ.
9. ಬ್ಯಾಂಕಿನ ಉಪನಿಯಮಗಳಿಗೆ ತಿದ್ದುಪಡಿ ಮಾಡುವ ಕುರಿತು.
10. ಬ್ಯಾಂಕಿನ ಸದಸ್ಯರು, ಪದಾಧಿಕಾರಿಗಳು ಮತ್ತು ನೌಕರರ ನೀತಿ ಸಂಹಿತೆ ರೂಪಿಸುವ ಬಗ್ಗೆ.
11. ಬ್ಯಾಂಕಿಗೆ ಸದಸ್ಯರನ್ನು ಸೇರಿಸಿಕೊಂಡ ಮತ್ತು ಸದಸ್ಯತ್ವದಿಂದ ಸಮಾಪನೆ ಮಾಡಿರುವ ಬಗ್ಗೆ ಟಿಪ್ಪಣಿ.
12. ಬ್ಯಾಂಕಿನ ಸದಸ್ಯರು ಮತ್ತು ನಿರ್ದೇಶಕರಿಂದ ಬ್ಯಾಂಕಿನ ಸೇವೆಗಳ ಬಳಕೆ ಬಗ್ಗೆ ಪರಿಶೀಲನೆ.
13. ಬ್ಯಾಂಕಿನ ನಿರ್ದೇಶಕರು ಮತ್ತು ಅವರ ಸಂಬಂಧಿಕರು ಪಡೆದಿರುವ ಸಾಲಗಳ ಪರಿಶೀಲನೆ ಮತ್ತು ಸುಸ್ತಿಯಾಗಿದ್ದಲ್ಲಿ ವಸೂಲಾತಿಗೆ ಕೈಗೊಂಡಿರುವ ಕ್ರಮ.
14. ವಿಚಾರಣಾ ಮತ್ತು ಪರಿವೀಕ್ಷಣಾ ವರದಿಯ ಪರಿಶೀಲನೆ, ಮಂಡಲಿಯ ಅನುಪಾಲನಾ ವರದಿಯ ಪರಿಶೀಲನೆ. (ಇದ್ದರೆ)
15. 2023–24ನೇ ಸಾಲಿಗೆ ಲೆಕ್ಕ ಪರಿಶೋಧಕರ ನೇಮಕಾತಿ ಮತ್ತು ಆತನಿಗೆ ಕೊಡಬಹುದಾದ ಸಂಭಾವನೆಯ ನಿರ್ಧಾರಣೆ.
16. ವಸೂಲಾತಿಯಾಗದ ಸುಸ್ತಿ ಸಾಲಗಳ ಪರಿಶೀಲನೆ ಹಾಗೂ ಅನುಮೋದನೆ.
17. ಮಂಡಲಿ ಮತ್ತು ಪದಾಧಿಕಾರಿಗಳಿಗೆ ನೀಡಿರುವ ಸಂಭಾವನೆ, ಪ್ರಯಾಣ ಹಾಗೂ ದಿನ ಭತ್ಯೆಯ ಅನುಮೋದನೆ.
18. ಮೀಸಲು ಅಥವಾ ಇತರೆ ನಿಧಿಗಳ ವಾಸ್ತವಿಕ ಬಳಕೆಯ ಬಗ್ಗೆ ಪರಿಶೀಲನೆ.
19. ಸಿಬ್ಬಂದಿಗಳ ನೇಮಕ, ವೇತನ ಇತರೇ ಆರ್ಥಿಕ ಸೌಲಭ್ಯಗಳ ಪರಿಶೀಲನೆ ಹಾಗೂ ಅಗತ್ಯ ಕ್ರಮ.
20. ಮಂಡಲಿಯು ಬ್ಯಾಂಕಿಗೆ ಅಗತ್ಯವಿದ್ದಲ್ಲಿ ಬಾಹ್ಯ ಮೂಲಗಳಿಂದ ಪಡೆಯಬಹುದಾದ ಸಾಲಗಳ ಗರಿಷ್ಠ ಮಿತಿಯನ್ನು ನಿಗದಿಪಡಿಸುವುದು.
21. ಕಾಯ್ದೆ ಕಾಲಂ 27(1)ರ ಅನ್ವಯ ಸಾಮಾನ್ಯ ಸಭೆಯಲ್ಲಿ ಚರ್ಚಿಸುವ ವಿಷಯಗಳ ಕುರಿತು ನಮೂದಿಸಿದ್ದು ಆ ಪೈಕಿ ಮೇಲಿನ ವಿಷಯಗಳಲ್ಲದೆ ಇನ್ನಿತರ ವಿಷಯಗಳನ್ನು ಚರ್ಚಿಸಿ ಅನುಮೋದಿಸುವ ಕುರಿತು.
22. ಮುನ್ಸೂಚನೆಯ ಮೇರೆಗೆ ಮತ್ತು ಸಭಾಪತಿಯವರ ಅನುಮತಿಯ ಮೇರೆಗೆ ಚರ್ಚಿಸಬಹುದಾದ ಇತರೆ ವಿಷಯಗಳು.

ಆಡಳಿತ ಮಂಡಲಿಯ ಅಪ್ಪಣೆಯ ಮೇರೆಗೆ

ಶ್ರೀ ಎಂ. ಕೃಷ್ಣದೇವರಾಯ
ವ್ಯವಸ್ಥಾಪಕರು

ಶ್ರೀ ಚಿಲಕೂರಿ ವೆಂಕಟರಾಮಕೃಷ್ಣ
ಅಧ್ಯಕ್ಷರು

# ಶ್ರೀರಾಮನಗರ ಪಟ್ಟಣ ಸಹಕಾರ ಬ್ಯಾಂಕ್ ನಿ.,

**ವಿಷಯ 1 : ಸನ್ 2022-23 ನೇ ಸಾಲಿನ ಮಹಾಸಭೆಯ ನೋಟೀಸು ಓದಿ ದಾಖಲಿಸುವುದು.**

**ಟಿಪ್ಪಣಿ :** ನಮ್ಮ ಬ್ಯಾಂಕಿನ 2022-2023ನೇ ಸಾಲಿನ ವಾರ್ಷಿಕ ಮಹಾಸಭೆ ನೋಟೀಸ ನ್ನು ಓದಿ ದಾಖಲಿಸಲು ಮಂಡಿಸಿದೆ.

**ವಿಷಯ 2 : ಹಿಂದಿನ ಸಾಮಾನ್ಯ ಸಭೆಯ ನಡವಳಿಕೆಗಳನ್ನು ಓದಿ ದೃಢೀಕರಿಸುವುದು.**

**ಟಿಪ್ಪಣಿ** : ನಮ್ಮ ಬ್ಯಾಂಕಿನ 2021-2022ನೇ ಸಾಲಿನ ವಾರ್ಷಿಕ ಮಹಾಸಭೆ ದಿನಾಂಕ 30-07-2022 ಶನಿವಾರ ಬೆಳಿಗ್ಗೆ 11-00 ಗಂಟೆಗೆ ಶ್ರೀರಾಮನಗರದ 6ನೇ ವಾರ್ಡಿನ, ಶ್ರೀ ವೆಂಕಟೇಶ್ವರ ದೇವಸ್ಥಾನದ ಸಮುದಾಯ ಭವನ (ಕಲ್ಯಾಣ ಮಂಟಪ)ದಲ್ಲಿ, ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಚಿಲುಕೂರಿ ವೆಂಕಟರಾಮಕೃಷ್ಣ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಜರುಗಿದ ಬ್ಯಾಂಕಿನ 26ನೇ ಸರ್ವಸದಸ್ಯರ ಮಹಾಸಭೆಯ ನಡವಳಿಕೆಗಳು.

**ಹಾಜರಿದ್ದ ಸದಸ್ಯರ ಸಂಖ್ಯೆ : 409**

**(ವಿಷಯ 3) : 2021-22ನೇ ಸಾಲಿನ ಆಡಳಿತ ಮಂಡಲಿಯ ವಾರ್ಷಿಕ ವರದಿಯನ್ನು ಪರಿಶೀಲಿಸಿ ಅನುಮೋದಿಸುವುದು**

**ಟಿಪ್ಪಣಿ** : ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಚಿಲುಕೂರಿ ವೆಂಕಟರಾಮಕೃಷ್ಣ ಅವರು 2021-22 ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತಾ, ದಿನಾಂಕ 31-3-2022 ಕ್ಕೆ ಬ್ಯಾಂಕು 2499 ಸದಸ್ಯರು, ರೂ. 82.49 ಲಕ್ಷ ಷೇರು ಬಂಡವಾಳ ಹೊಂದಿದ್ದು, ರೂ. 582.81 ಲಕ್ಷ ಸ್ವಂತ ನಿಧಿಗಳು, ರೂ. 4986.62 ಲಕ್ಷ ಠೇವಣಿಗಳು, ರೂ 5863.54 ಲಕ್ಷ ದುಡಿಯುವ ಬಂಡವಾಳ ರೂ. 1711.89 ಲಕ್ಷ ಹೂಡಿಕೆಗಳು, ರೂ. 3385.69 ಲಕ್ಷ ಸಾಲಗಳು ಹೊಂದಿ 7 ಖಾತೆಗಳಿಂದ ರೂ. 11.50 ಲಕ್ಷಗಳ ಅನುತ್ಪಾದಕ ಆಸ್ತಿಗಳನ್ನು ಹೊಂದಿರುವುದಾಗಿ ತಿಳಿಸಿ, ರೂ. 555.09 ಕೋಟಿ ಜಮಾ-ಖರ್ಚು ಮಾಡಿ ರೂ.18.50 ಲಕ್ಷಗಳ ಆದಾಯ ತೆರಿಗೆ ಪಾವತಿಸಿದ ನಂತರ ರೂ. 57.90 ಲಕ್ಷ ನಿವ್ವಳ ಲಾಭ ಗಳಿಸಿರುವುದಾಗಿ ಸಭೆಗೆ ತಿಳಿಸಿದರು. ಸನ್ 2021-22 ನೇ ಸಾಲಿನಲ್ಲಿ, 9 ನಿರ್ದೇಶಕ ಮಂಡಲಿ ಸಭೆಗಳು ಜರುಗಿರುತ್ತವೆ. ಮುಂಬರುವ ಆರ್ಥಿಕ ವರ್ಷದಲ್ಲಿ ರೂ. 600.00 ಕೋಟಿಯಷ್ಟು ಬ್ಯಾಂಕಿಂಗ್ ವ್ಯವಹಾರವನ್ನು, ರೂ. 55.00 ಕೋಟಿ ಠೇವಣಿ ಸಂಗ್ರಹ, ರೂ. 43.00 ಕೋಟಿ ವರೆಗೆ ಸಾಲ ವಿತರಣೆ, ಅನುತ್ಪಾದಕ ಆಸ್ತಿಯನ್ನು ಶೂನ್ಯಕ್ಕೆ ಇಳಿಸುವುದು, ಎಟಿಎಂ, ಸೇವೆ ಒದಗಿಸುವ ಕಾರ್ಯಯೋಜನೆಯನ್ನು ರೂಪಿಸಲಾಗಿದೆ ಎಂದು ಸಭೆಗೆ ತಿಳಿಸಿದರು. ಈ ಸಂಬಂಧ ಬ್ಯಾಂಕಿಗೆ ಸಹಕರಿಸಿದ ನಿರ್ದೇಶಕರಿಗೆ, ಸದಸ್ಯರಿಗೆ, ಗ್ರಾಹಕರಿಗೆ, ಎಲ್ಲಾ ಸಂಘ ಸಂಸ್ಥೆಗಳಿಗೆ, ಮತ್ತು ಬ್ಯಾಂಕಿನ ಸಿಬ್ಬಂದಿಗೆ ಧನ್ಯವಾದಗಳನ್ನು ಸಲ್ಲಿಸಿದರು.

**(ವಿಷಯ 4) : 2021-22ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ ಮತ್ತು ಮಂಡಲಿ ಅನುಪಾಲನಾ ವರದಿಯನ್ನು ಪರಿಶೀಲಿಸುವುದು.**

**ಟಿಪ್ಪಣಿ** : ಸನ್ 2021-22ನೇ ಸಾಲಿನ ಲೆಕ್ಕ ಪರಿಶೋಧನೆಗೊಂಡ ಜಮಾ-ಖರ್ಚು, ಲಾಭ-ಹಾನಿ ಪತ್ರಿಕೆ, ಹಾಗೂ ಅಢಾವೆ ಪತ್ರಿಕೆ, ಮುಂತಾದ ಆರ್ಥಿಕ ತಖ್ತೆಗಳನ್ನು ಮತ್ತು ಲೆಕ್ಕ ಪರಿಶೋಧಕರು ಗುರುತಿಸಿದ ನ್ಯೂನ್ಯತೆಗಳನ್ನು ಮತ್ತು ಮಂಡಲಿಯ ಅನುಪಾಲನಾ ವರದಿಯನ್ನು ಮಂಡಿಸಲಾಯಿತು, ಸಭೆಯಲ್ಲಿ ಚರ್ಚಿಸಿ ಸರ್ವಾನುಮತದಿಂದ ಅಂಗೀಕರಿಸಿ ಠರಾವು ಪಾಸು ಮಾಡಲಾಯಿತು.

**(ವಿಷಯ 5) : ಸನ್ 2021–22ನೇ ಸಾಲಿನ ನಿವ್ವಳ ಲಾಭದ ವಿಲೇವಾರಿ**

**ಟಿಪ್ಪಣಿ** : ಸನ್ 2021–22 ನೇ ಸಾಲಿನ ಬ್ಯಾಂಕು ಗಳಿಸಿದ ರೂ. 57.90 ಲಕ್ಷ ಒಟ್ಟು ನಿವ್ವಳ ಲಾಭವನ್ನು 2021–22 ನೇ ಸಾಲಿನ ವರದಿ ಪುಸ್ತಕದ ಪುಟ ಸಂಖ್ಯೆ 11 ರಲ್ಲಿ ಮುದ್ರಿಸಿರುವಂತೆ ವಿಲೇವಾರಿ ಮಾಡಲು ಅಂಗೀಕರಿಸಿ ಸರ್ವಾನುಮತದಿಂದ ಠರಾವು ಪಾಸು ಮಾಡಲಾಯಿತು.

**(ವಿಷಯ 6) : 2022–23ನೇ ಸಾಲಿನ ಬಜೆಟ್‌ನ್ನು ಪರಿಶೀಲಿಸಿ ಅನುಮೋದಿಸುವುದು**

**ಟಿಪ್ಪಣಿ** : ಸನ್ 2022–23ನೇ ಸಾಲಿಗಾಗಿ ಬ್ಯಾಂಕು ರೂಪಿಸಿಕೊಂಡ ಬಜೆಟ್‌ನ್ನು 2021–22 ನೇ ಸಾಲಿನ ವರದಿ ಪುಸ್ತಕದ ಪುಟ ಸಂಖ್ಯೆ 12 ರಲ್ಲಿ ಮುದ್ರಿಸಿದಂತೆ ಪರಿಶೀಲಿಸಿ ಸರ್ವಾನುಮತದಿಂದ ಅಂಗೀಕರಿಸಿ ಠರಾವು ಪಾಸು ಮಾಡಲಾಯಿತು.

**(ವಿಷಯ 7) : ನಿರ್ದಿಷ್ಟ ಮತ್ತು ಮೀಸಲು ಮತ್ತು ಇತರೆ ನಿಧಿಗಳನ್ನು ಸೃಜಿಸುವುದು.**

**ಟಿಪ್ಪಣಿ** : ಉಪನಿಯಮಗಳ ಅನ್ವಯ ನಿಧಿಗಳನ್ನು ಸೃಜಿಸಲಾಗಿದ್ದು ಯಾವುದೇ ಸೇರ್ಪಡೆಗಳಿರುವುದಿಲ್ಲಾ ಎಂದು ಅಧ್ಯಕ್ಷರು ಸಭೆಗೆ ತಿಳಿಸಿದರು, ಸಭೆಯು ಸರ್ವಾನುಮತದಿಂದ ಅಂಗೀಕರಿಸಿ ಠರಾವು ಪಾಸು ಮಾಡಲಾಯಿತು.

**(ವಿಷಯ 8) : ಮಂಡಲಿಯ ಸದಸ್ಯರ ಮತ್ತು ಕಾರ್ಯನಿರ್ವಾಹಕನ ಸಂಬಂಧಿಗಳು ಸಿಬ್ಬಂದಿಗಳಾಗಿ ನೇಮಕವಾಗಿದ್ದರೆ ಅಂಥ ಸಿಬ್ಬಂದಿಗಳ ಪಟ್ಟಿಯ ಪರಿಶೀಲನೆ.**

**ಟಿಪ್ಪಣಿ** : ಇಂತಹ ಪ್ರಕರಣಗಳು ಇರುವದಿಲ್ಲ ಎಂಬ ವಿಷಯವನ್ನು ಮಂಡಿಸಿದಾಗ ಇದನ್ನು ಅಂಗೀಕರಿಸಿ ಸಭೆಯಲ್ಲಿ ಸರ್ವಾನುಮತದಿಂದ ಠರಾವು ಪಾಸು ಮಾಡಲಾಯಿತು.

**(ವಿಷಯ 9) : ಬ್ಯಾಂಕಿನ ಉಪ ನಿಯಮಗಳಿಗೆ ತಿದ್ದುಪಡಿ ಮಾಡುವ ಕುರಿತು**

**ಟಿಪ್ಪಣಿ** : ಬ್ಯಾಂಕಿನ ಉಪ ನಿಯಮಗಳಿಗೆ ತಿದ್ದುಪಡಿ / ಸೇರ್ಪಡೆ ಗಳು ಇರುವುದಿಲ್ಲಾ ಎಂಬ ವಿಷಯವನ್ನು ಮಂಡಿಸಿದಾಗ ಇದನ್ನು ಅಂಗೀಕರಿಸಿ ಸಭೆಯಲ್ಲಿ ಸರ್ವಾನುಮತದಿಂದ ಠರಾವು ಪಾಸು ಮಾಡಲಾಯಿತು.

**ವಿಷಯ 10) : ಬ್ಯಾಂಕಿನ ಸದಸ್ಯರು, ಪದಾಧಿಕಾರಿಗಳು ಮತ್ತು ನೌಕರರ ನೀತಿ ಸಂಹಿತೆ ರೂಪಿಸುವ ಬಗ್ಗೆ.**

**ಟಿಪ್ಪಣಿ** : ಬ್ಯಾಂಕಿನ ಸದಸ್ಯರು, ಪದಾಧಿಕಾರಿಗಳು ಮತ್ತು ನೌಕರರ ನೀತಿ ಸಂಹಿತೆಯು ಬ್ಯಾಂಕಿನ ಉಪನಿಯಮಗಳಲ್ಲಿ ರೂಪಿಸಿ ಜಾರಿಯಲ್ಲಿರುತ್ತದೆ ಎಂದು ಅಧ್ಯಕ್ಷರು ಮಹಾಸಭೆಗೆ ತಿಳಿಸಿದರು, ಮಹಾಸಭೆಯು ಸರ್ವಾನುಮತದಿಂದ ತನ್ನ ಅನುಮೋದನೆ ನೀಡಿ ಠರಾವು ಪಾಸು ಮಾಡಲಾಯಿತು.

**ವಿಷಯ 11) : ಬ್ಯಾಂಕಿಗೆ ಸದಸ್ಯರನ್ನು ಸೇರಿಸಿಕೊಂಡ ಹಾಗೂ ಸದಸ್ಯತ್ವದಿಂದ ಸಮಾಪನೆ ಮಾಡಿರುವ ಬಗ್ಗೆ.**

ಟಿಪ್ಪಣಿ : ವರದಿ ಸಾಲಿನ ಆರಂಭಕ್ಕೆ ಬ್ಯಾಂಕು ಒಟ್ಟು 2485 ಜನ ಖಾಯಂ ಸದಸ್ಯರನ್ನು ಹೊಂದಿದ್ದು ವರದಿ ಸಾಲಿನಲ್ಲಿ 46 ಜನ ಹೊಸದಾಗಿ ಸದಸ್ಯತ್ವ ಪಡೆದಿರುತ್ತಾರೆ ಹಾಗೂ ವಿವಿಧ ಕಾರಣಗಳಿಂದ 32 ಜನರ ಸದಸ್ಯತ್ವ ಸಮಾಪನೆಗೊಂಡಿದ್ದು ವರ್ಷಾಂತ್ಯಕ್ಕೆ ಒಟ್ಟು 2499 ಜನ ಸದಸ್ಯರು ಇರುತ್ತಾರೆ. ಹಾಗೂ ವರ್ಷ್ಯಾಂತ್ಯಕ್ಕೆ 12 ಜನ ಸಹಸದಸ್ಯರು ಸೇರ್ಪಡೆಗೊಂಡು 6 ಜನರ ಸಹ ಸದಸ್ಯತ್ವ ಸಮಾಪನೆಗೊಂಡಿದ್ದು ಒಟ್ಟು 374 ಜನ ಸಹಸದಸ್ಯರು ಇರುತ್ತಾರೆ ಎಂದು ಅಧ್ಯಕ್ಷರು ವಿವರಿಸಿದರು ಸಭೆಯು ಸರ್ವಾನುಮತದಿಂದ ತನ್ನ ಅನುಮೋದನೆ ನೀಡಿತು,

**(ವಿಷಯ 12): ಬ್ಯಾಂಕಿನ ಸದಸ್ಯರು ಮತ್ತು ನಿರ್ದೇಶಕರಿಂದ ಬ್ಯಾಂಕಿನ ಸೇವೆಗಳ ಬಳಕೆ ಬಗ್ಗೆ ಪರಿಶೀಲನೆ.**

**ಟಿಪ್ಪಣಿ** : ಬ್ಯಾಂಕಿನ ಪ್ರತಿಯೊಬ್ಬ ಸದಸ್ಯನು ತಮ್ಮ ಹಕ್ಕು ಚಲಾಯಿಸಲು ಬ್ಯಾಂಕಿನ ಉಪವಿಧಿ ಸಂಖ್ಯೆ 20ರ ಪ್ರಕಾರ ನಿಗದಿಪಡಿಸಲಾದ ಕನಿಷ್ಠ ಸೇವೆ ಅಥವಾ ಸೌಲಭ್ಯಗಳನ್ನು (ವಿವರ ಪುಟ ಸಂಖ್ಯೆ 27ರಂತೆ) ಬಳಸಿಕೊಳ್ಳುವುದು ಕಡ್ಡಾಯವಾಗಿರುತ್ತದೆ. ಈ ಸಾಲಿನಲ್ಲಿ ಬ್ಯಾಂಕಿನ ಎಲ್ಲಾ ನಿರ್ದೇಶಕರನ್ನು ಸೇರಿಸಿ ಬ್ಯಾಂಕಿನ ಒಟ್ಟು 2485 ಜನ ಸದಸ್ಯರ ಪೈಕಿ 656 ಜನ ಸದಸ್ಯರು ತಮ್ಮ ಕನಿಷ್ಠ ಸೇವೆಗಳನ್ನು ಉಪಯೋಗಿಸಿಕೊಂಡಿರುತ್ತಾರೆ, ಅದೇ ತರಹ ದಿನಾಂಕ 12-12-2021 ರಂದು ನಡೆದ ಸರ್ವ ಸದಸ್ಯರ ಮಹಾಸಭೆಗೆ 383 ಜನ ಸದಸ್ಯರು ಹಾಜರಾಗಿರುತ್ತಾರೆ ಎಂದು ಸಭೆಗೆ ಅಧ್ಯಕ್ಷರು ವಿವರಿಸಿದರು ಮಹಾ ಸಭೆಯು ಸರ್ವಾನುಮತದಿಂದ ತನ್ನ ಅನುಮೋದನೆ ನೀಡಿ ಠರಾವು ಪಾಸು ಮಾಡಲಾಯಿತು.

**(ವಿಷಯ 13): ಬ್ಯಾಂಕಿನ ನಿರ್ದೇಶಕರು ಮತ್ತು ಅವರ ಸಂಬಂಧಿಕರು ಪಡೆದಿರುವ ಸಾಲಗಳ ಪರಿಶೀಲನೆ ಮತ್ತು ಸುಸ್ತಿಯಾಗಿದ್ದಲ್ಲಿ ವಸೂಲಾತಿಗೆ ಕೈಗೊಂಡಿರುವ ಕ್ರಮ**

**ಟಿಪ್ಪಣಿ** : ಇಂತಹ ಪ್ರಕರಣಗಳು ಇರುವದಿಲ್ಲ ಎಂದು ಅಧ್ಯಕ್ಷರು ಸಭೆಗೆ ತಿಳಿಸಿದರು, ಸಭೆಯು ಸರ್ವಾನುಮತದಿಂದ ತಮ್ಮ ಅನುಮೋದನೆ ನೀಡಿ ಠರಾವು ಪಾಸು ಮಾಡಲಾಯಿತು.

**(ವಿಷಯ 14) : ವಿಚಾರಣಾ ಮತ್ತು ಪರಿವೀಕ್ಷಣಾ ವರದಿಯ ಪರಿಶೀಲನೆ, ಮಂಡಲಿಯ ಅನುಪಾಲನಾ ವರದಿಯ ಪರಿಶೀಲನೆ. (ಇದ್ದರೆ)**

**ಟಿಪ್ಪಣಿ** : ವರದಿ ಸಾಲಿನಲ್ಲಿ ಯಾವುದೇ ವಿಚಾರಣಾ ಮತ್ತು ಪರಿವೀಕ್ಷಣೆ ಇರುವುದಿಲ್ಲಾ ಎಂದು ಅಧ್ಯಕ್ಷರು ಸಭೆಗೆ ತಿಳಿಸಿದರು, ಸಭೆಯು ಸರ್ವಾನುಮತದಿಂದ ತನ್ನ ಅನುಮೋದನೆ ನೀಡಿ ಠರಾವು ಪಾಸು ಮಾಡಲಾಯಿತು.

**(ವಿಷಯ 15): 2022-23ನೇ ಸಾಲಿಗೆ ಲೆಕ್ಕ ಪರಿಶೋಧಕರ ನೇಮಕಾತಿ ಮತ್ತು ಆತನಿಗೆ ಕೊಡಬಹುದಾದ ಸಂಭಾವನೆಯ ನಿರ್ಧಾರಣೆ.**

**ಟಿಪ್ಪಣಿ** : ಮಾನ್ಯ ಭಾರತೀಯ ರಿಝರ್ವ ಬ್ಯಾಂಕಿನ ಅನುಮೋದನೆಯಂತೆ 2022-23 ನೇ ಸಾಲಿಗೆ ಬ್ಯಾಂಕಿನ ಲೆಕ್ಕ ಪರಿಶೋಧಕರಾಗಿ ಈ ಕೆಳಗಿನ ಆಡಿಟ್ ಫರ್ಮುಗಳಲ್ಲಿ ಒಬ್ಬರನ್ನು ಲೆಕ್ಕ ಪರಿಶೋಧಕರಾಗಿ ನೇಮಕ ಮಾಡುವ ಮತ್ತು ಅವರಿಗೆ ಕೊಡಬಹುದಾದ ಸಂಭಾವನೆಯನ್ನು ನಿರ್ಧರಿಸವ ಅಧಿಕಾರವನ್ನು ಬ್ಯಾಂಕಿನ ನಿರ್ದೇಶಕ ಮಂಡಳಿಗೆ ನೀಡುತ್ತಾ ಸಭೆಯಲ್ಲಿ ಸರ್ವಾನುಮತದಿಂದ ಠರಾವು ಪಾಸು ಮಾಡಲಾಯಿತು.

ಭಾರತೀಯ ರಿಝರ್ವ ಬ್ಯಾಂಕಿಗೆ ಅನುಮೋದನೆಗಾಗಿ ಕಳುಹಿಸಲಾದ ಲೆಕ್ಕ ಪರಿಶೋಧಕರ ವಿವರ ಈ ಕೆಳಗೆ ನೀಡಲಾಗಿದೆ.

| Name of the Audit Firm | Reg. No. | Place |
|---|---|---|
| NEELAKARI MAHINDRAKAR ASSOCIATES | 002459S | Hubli |
| S M INCHALMATH & CO | 103746W | Hubli |

**(ವಿಷಯ 16): ವಸೂಲಾತಿಯಾಗದ ಸುಸ್ತಿ ಸಾಲಗಳ ಪರಿಶೀಲನೆ ಹಾಗೂ ಅನುಮೋದನೆ.**

**ಟಿಪ್ಪಣಿ** : ಇಂತಹ ಯಾವುದೇ ಪ್ರಕರಣಗಳಿರುವುದಿಲ್ಲ ಎಂದು ಅಧ್ಯಕ್ಷರು ಸೂಚಿಸಿದರು ಸಭೆ ಅನುಮೋದನೆ ನೀಡಿತು.

**(ವಿಷಯ 17): ಮಂಡಲಿ ಮತ್ತು ಪದಾಧಿಕಾರಿಗಳಿಗೆ ನೀಡಿರುವ ಸಂಭಾವನೆ ಪ್ರಯಾಣ ಹಾಗೂ ದಿನ ಭತ್ಯೆಯ ಅನುಮೋದನೆ.**

ಟಿಪ್ಪಣಿ : ವರದಿ ಸಾಲಿನಲ್ಲಿ ಮಂಡಲಿಯ ಸದಸ್ಯರು ಮತ್ತು ಪದಾಧಿಕಾರಿಗಳಿಗೆ ಯಾವುದೇ ಸಭಾ ಭತ್ಯೆ, ಪ್ರಯಾಣ ಹಾಗೂ ದಿನ ಭತ್ಯೆಯನ್ನು ನೀಡಿರುವುದಿಲ್ಲ. ಅವಶ್ಯವಾದಲ್ಲಿ, ಮಂಡಲಿಯ ಸದಸ್ಯರು ಮತ್ತು ಪದಾಧಿಕಾರಿಗಳಿಗೆ ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಲಿ, ನಿಗದಿ ಪಡಿಸಿರುವ ಮಾದರಿ ಪ್ರವಾಸ ಭತ್ಯೆ, ಸಭಾಭತ್ಯೆ, ಮತ್ತು ದಿನಭತ್ಯೆಗಳನ್ನು ನೀಡಲು ಅಧ್ಯಕ್ಷರು ಸಭೆಯ ಅನುಮೋದನೆಯನ್ನು ಕೋರಿದರು ಸಭೆಯು ಸರ್ವಾನುಮತದಿಂದ ತನ್ನ ಅನುಮೋದನೆ ನೀಡಿತು.

**(ವಿಷಯ 18): ಮೀಸಲು ಅಥವಾ ಇತರೆ ನಿಧಿಗಳ ವಾಸ್ತವಿಕ ಬಳಕೆಯ ಬಗ್ಗೆ ಪರಿಶೀಲನೆ.**

**ಟಿಪ್ಪಣಿ** : ಬ್ಯಾಂಕು 31-3-2022 ಕ್ಕೆ ರೂ. 5,82,80,886-37 ನಿಧಿಗಳನ್ನು ಹೊಂದಿದ್ದು ಈ ಪೈಕಿ ವರದಿ ಸಾಲಿನಲ್ಲಿ ರೂ 8000-00 ಗಳನ್ನು ಸದಸ್ಯರ ಕ್ಷೇಮ ನಿಧಿಯಿಂದ ಮೃತ ಸದಸ್ಯರ ವಾರಸುದಾರರಿಗೆ ಪಾವತಿಸಲಾಗಿದೆ. ಲಾಭಾಂಶ ಸರಿಪಡಿಸುವ ನಿಧಿಯಿಂದ ಸದಸ್ಯರಿಗೆ ಡಿವಿಡೆಂಡ್ ನೀಡಲು ರೂ. 7,18,924-00 ಅನುಮೋದನೆ ನೀಡಲು ಅಧ್ಯಕ್ಷರು ಸಭೆಯ ಅನುಮೋದನೆಯನ್ನು ಕೋರಿದರು ಸಭೆಯು ಸರ್ವಾನುಮತದಿಂದ ತನ್ನ ಅನುಮೋದನೆ ನೀಡಿ ಠರಾವು ಪಾಸು ಮಾಡಲಾಯಿತು.

**(ವಿಷಯ 19): ಸಿಬ್ಬಂದಿಗಳ ನೇಮಕ, ವೇತನ ಇತರೆ ಆರ್ಥಿಕ ಸೌಲಭ್ಯಗಳ ಪರಿಶೀಲನೆ ಹಾಗೂ ಅಗತ್ಯ ಕ್ರಮ**

ಟಿಪ್ಪಣಿ : ಬ್ಯಾಂಕಿನಲ್ಲಿ 5 ಜನ ಕಾಯಂ ಸಿಬ್ಬಂದಿ ಹಾಗೂ ನಾಲ್ಕು ಜನ ಗುತ್ತಿಗೆ ಆಧಾರದ ಸಿಬ್ಬಂದಿ ಕೆಲಸ ನಿರ್ವಹಿಸುತ್ತಿದ್ದು, ವರದಿ ವರ್ಷದಲ್ಲಿ ಸಿಬ್ಬಂದಿಯ ಯಾವುದೇ ನೇಮಕಾತಿ ನಡೆದಿರುವುದಿಲ್ಲ. ಮುಂಬರುವ ದಿನಗಳಲ್ಲಿ ಬ್ಯಾಂಕಿನ ವ್ಯವಹಾರ ಹಾಗೂ ಕಾರ್ಯಭಾರವನ್ನು ಪರಿಗಣಿಸಿ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲು ಆಡಳಿತ ಮಂಡಲಿಯು ತೀರ್ಮಾನಿಸಿದ್ದು, ಇದಕ್ಕೆ ಸಭೆಯ ಅನುಮೋದನೆಯನ್ನು ಅಧ್ಯಕ್ಷರು ಕೋರಿದರು ಸಭೆಯ ಸದಸ್ಯರು ಸರ್ವಾನುಮತದಿಂದ ತಮ್ಮ ಅನುಮೋದನೆ ನೀಡಿ ಠರಾವು ಪಾಸು ಮಾಡಲಾಯಿತು..

**(ವಿಷಯ 20): ಮಂಡಲಿಯು ಬ್ಯಾಂಕಿಗೆ ಅಗತ್ಯವಿದ್ದಲ್ಲಿ ಬಾಹ್ಯ ಮೂಲಗಳಿಂದ ಪಡೆಯಬಹುದಾದ ಸಾಲಗಳ ಗರಿಷ್ಠ ಮಿತಿಯನ್ನು ನಿಗದಿಪಡಿಸುವುದು.**

ಟಿಪ್ಪಣಿ : ಬ್ಯಾಂಕಿನ ಸಂಪನ್ಮೂಲಗಳಿಗಿಂತ ಸಾಲದ ಬೇಡಿಕೆ ಹೆಚ್ಚಿಗೆ ಇರುವುದರಿಂದ, ಇತರೆ ಬ್ಯಾಂಕುಗಳಿಂದ ಮತ್ತು ಹಣಕಾಸು ಸಂಸ್ಥೆಗಳಿಂದ ರೂ. 1500.00 ಲಕ್ಷಗಳ ವರೆಗೆ ಸಾಲ ಪಡೆಯಲು ಆಡಳಿತ ಮಂಡಳಿ ನಿರ್ಧರಿಸಿದ್ದು ಈ ವಿಷಯವನ್ನು ಪರಿಶೀಲಿಸಿ ಅನುಮೋದನೆ ನೀಡಬೇಕೆಂದು ಅಧ್ಯಕ್ಷರು ಕೋರಿದರು. ಮಹಾಸಭೆಯ ಸದಸ್ಯರು ಸರ್ವಾನುಮತದಿಂದ ತಮ್ಮ ಅನುಮೋದನೆ ನೀಡಿ ಠರಾವು ಪಾಸು ಮಾಡಲಾಯಿತು.

**(ವಿಷಯ 21): ಕಾಯ್ದೆ ಕಾಲಂ 27(1)ರ ಅನ್ವಯ ಸಾಮಾನ್ಯ ಸಭೆಯಲ್ಲಿ ಚರ್ಚಿಸುವ ವಿಷಯಗಳ ಕುರಿತು ನಮೂದಿಸಿದ್ದು ಆ ಪೈಕಿ ಮೇಲಿನ ವಿಷಯಗಳಲ್ಲದೆ ಇನ್ನಿತರ ವಿಷಯಗಳನ್ನು ಚರ್ಚಿಸಿ ಅನುಮೋದಿಸುವ ಕುರಿತು.**

**ಟಿಪ್ಪಣಿ** : ಕಾಯ್ದೆ ಕಾಲಂ 27(1)ರ ಅನ್ವಯ ಸಾಮಾನ್ಯ ಸಭೆಯಲ್ಲಿ ಚರ್ಚಿಸುವ ವಿಷಯಗಳ ಕುರಿತು ನಮೂದಿಸಿದ್ದು ಆ ಪೈಕಿ ಮೇಲಿನ ವಿಷಯಗಳಲ್ಲದೆ ಇನ್ನಿತರ ವಿಷಯಗಳು ಇಲ್ಲದಿರುವುದು ಕಂಡುಬಂದಿರುತ್ತದೆ ಎಂದು ಅಧ್ಯಕ್ಷರು ತಿಳಿಸಿದರು, ಸಭೆಯು ಸರ್ವಾನುಮತದಿಂದ ತಮ್ಮ ಅನುಮೋದನೆ ನೀಡಿತು.

# ಶ್ರೀರಾಮನಗರ ಪಟ್ಟಣ ಸಹಕಾರ ಬ್ಯಾಂಕ್ ನಿ., ಶ್ರೀರಾಮನಗರ

ತಾ॥ ಗಂಗಾವತಿ. ಜಿ॥ ಕೊಪ್ಪಳ

ಆತ್ಮೀಯ ಸಹಕಾರಿ ಬಂಧುಗಳೇ,

ಎಲ್ಲರಿಗೂ ವಂದನೆಗಳು, ಬ್ಯಾಂಕಿನ 28ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಗೆ ತಮ್ಮೆಲ್ಲರನ್ನು ಆಡಳಿತ ಮಂಡಲಿ ಪರವಾಗಿ ತುಂಬು ಹೃದಯದಿಂದ ಸ್ವಾಗತಿಸುತ್ತೇನೆ.



ಈ ನಿಮ್ಮ ಬ್ಯಾಂಕು ತಮ್ಮೆಲ್ಲರ ಸಹಕಾರ ಹಾಗೂ ಪ್ರೋತ್ಸಾಹದಿಂದ ತನ್ನ ಧ್ಯೇಯ ಹಾಗೂ ಉದ್ದೇಶಗಳನ್ನು ಪೂರೈಸಿಕೊಳ್ಳುತ್ತಾ 27 ವರ್ಷಗಳನ್ನು ಪೂರೈಸಿ 28ನೇ ವರ್ಷಕ್ಕೆ ಪಾದಾರ್ಪಣೆ ಮಾಡಿರುವುದು ನಮ್ಮ ನಿಮ್ಮೆಲ್ಲರಿಗೆ ಸಂತೋಷದ ವಿಷಯ.

ಜಾಗತಿಕ ಆರ್ಥಿಕ ಹಿನ್ನಡೆಯಲ್ಲಿಯೂ ಸಹ ಭಾರತೀಯ ಬ್ಯಾಂಕಿಂಗ್ ರಂಗವು ಸರ್ಕಾರದ ಪ್ರೋತ್ಸಾಹಕ ನೀತಿಗಳಿಂದ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ನಗದು ಬಳಕೆ ಕಡಿಮೆಗೊಳಿಸಿ ಡಿಜಿಟಲ್ ವಹಿವಾಟುಗಳ ಸಂಖ್ಯೆಯನ್ನು ಹೆಚ್ಚಿಸುವ ಕೇಂದ್ರ ಸರ್ಕಾರದ ನೀತಿಯಿಂದ ಯು.ಪಿ.ಐ ವ್ಯವಹಾರಗಳು ಇತ್ತೀಚಿನ ದಿನಗಳಲ್ಲಿ ತುಂಬಾ ಹೆಚ್ಚಳವಾಗಿವೆ. ಈ ಸೇವೆಗಳನ್ನು ಗ್ರಾಹಕರಿಗೆ ಒದಗಿಸಲು ಯೋಜನೆಗಳನ್ನು ರೂಪಿಸಲಾಗುತ್ತಿದೆ.

ಕಳೆದ ಸಾಲಿನಲ್ಲಿ ಎಲ್ಲಾ ವರ್ಗದವರ ಆರ್ಥಿಕ ಅಗತ್ಯಗಳನ್ನು ಗುರುತಿಸಿ ಅವರ ಅಗತ್ಯಗಳಿಗೆ ಸ್ಪಂದಿಸಿ, ಉತ್ತಮ ಸೇವೆ ನೀಡಿರುವದರಿಂದ ಗ್ರಾಹಕರ ವಿಶ್ವಾಸವನ್ನು ಹೆಚ್ಚಿಸಿಕೊಂಡು ಬ್ಯಾಂಕು ತನ್ನ ಎಲ್ಲಾ ವಿಭಾಗಗಳಲ್ಲಿ ವರದಿ ವರ್ಷದಲ್ಲಿ ಉತ್ತಮ ಸಾಧನೆ ಮಾಡಿರುವುದು ನಮ್ಮ ನಿಮ್ಮೆಲ್ಲರಿಗೂ ಸಂತೋಷದ ಸಂಗತಿ. ಕಳೆದ ವರ್ಷ ಠೇವಣಿಗಳು ರೂ. 4986.62 ಲಕ್ಷ ಗಳಿಂದ ರೂ. 6040.00 ಲಕ್ಷಕ್ಕೆ ಏರಿಕೆಯಾಗಿರುತ್ತವೆ. ಠೇವಣಿಗಳಲ್ಲಿ ಶೇ 21.12% ರಷ್ಟು ಹೆಚ್ಚಳವಾಗಿರುತ್ತದೆ.

ರೂ.3385.69 ಲಕ್ಷ ಗಳಿದ್ದ ಬ್ಯಾಂಕಿನ ಸಾಲ ಹಾಗೂ ಮುಂಗಡಗಳು ಈ ವರ್ಷದಲ್ಲಿ ರೂ. 4374.58 ಲಕ್ಷ ಇದ್ದು, ಈ ಸಾಲಿನಲ್ಲಿ ಸಾಲ ಹಾಗೂ ಮುಂಗಡಗಳು 988.89 ಲಕ್ಷಗಳಷ್ಟು ಹೆಚ್ಚಳವಾಗಿರುತ್ತವೆ. ಬ್ಯಾಂಕಿನ ದುಡಿಯು ಬಂಡವಾಳವು ರೂ. 5863.54 ಲಕ್ಷಗಳಿಂದ ರೂ. 7040.96 ಲಕ್ಷಗಳಿಗೆ ಹೆಚ್ಚಳವಾಗಿರುತ್ತದೆ.

ದಿನಾಂಕ 31–03–2023 ಕ್ಕೆ ಅಂತ್ಯಗೊಂಡ ಬ್ಯಾಂಕಿನ 2022–23 ನೇ ಸಾಲಿನ ಆರ್ಥಿಕ ವ್ಯವಹಾರಗಳ ಸಮೀಕ್ಷೆಯನ್ನೊಳಗೊಂಡ ವಾರ್ಷಿಕ ವರದಿ, ಲಾಭ–ಹಾನಿ, ಹಾಗೂ ಅಢಾವೆ ಪತ್ರಿಕೆಗಳನ್ನು ತಮ್ಮ ಪರಿಶೀಲನೆಗೆ ಹಾಗೂ ಅನುಮೋದನೆಗೆ ಮಂಡಿಸುತ್ತಿದ್ದೇವೆ. ಸದಸ್ಯರ ಹಾಗೂ ಗ್ರಾಹಕರ ನಿರಂತರ ಸಹಕಾರ ಹಾಗೂ ಬೆಂಬಲದಿಂದ ಈ ನಿಮ್ಮ ಬ್ಯಾಂಕು ವರದಿ ಸಾಲಿನಲ್ಲಿ ಶೇರು ಬಂಡವಾಳ, ಠೇವಣಿಗಳು, ಹೂಡಿಕೆಗಳು, ಸ್ವಂತ ನಿಧಿಗಳು, ದುಡಿಯುವ ಬಂಡವಾಳ ಮುಂತಾದ ಅಂಶಗಳಲ್ಲಿ ಉತ್ತಮ ಬೆಳವಣಿಗೆ ಕಾಯ್ದುಕೊಂಡು ಬಂದಿರುತ್ತದೆ. 2022–23 ನೇ ಆರ್ಥಿಕ ವರ್ಷದಲ್ಲಿ ಬ್ಯಾಂಕು ರೂ 76,06,914.14 ಲಾಭ ಗಳಿಸಿ ರೂ 16,00,000–00 ಆದಾಯ ತೆರಿಗೆ ಪಾವತಿಸಿದ ನಂತರ ರೂ. 60,06,914–14 ನಿವ್ವಳ ಲಾಭ ಗಳಿಸಿರುತ್ತದೆ.

ಕಳೆದ 27 ವರ್ಷಗಳಿಂದ ಕಾಯ್ದುಕೊಂಡು ಬಂದ ಉತ್ತಮ ಪ್ರಮಾಣಗಳನ್ನು ಈ ವರದಿ ವರ್ಷದಲ್ಲಿಯೂ ಕಾಯ್ದುಕೊಂಡು ಬರಲಾಗಿದೆ. ಹಿರಿಯರ ಮಾರ್ಗದರ್ಶನ, ಆಡಳಿತ ಮಂಡಲಿ ಸಮಿತಿ ಸದಸ್ಯರ, ದಕ್ಷ, ಕಳಕಳಿ, ಹಾಗೂ ಪ್ರಾಮಾಣಿಕ ಮಾರ್ಗದರ್ಶನದಿಂದ, ಸಿಬ್ಬಂದಿ ಸದಸ್ಯರ ಪರಿಶ್ರಮ ಹಾಗೂ ಸೇವಾ

ಮನೋಭಾವದಿಂದ, ಸದಸ್ಯರ ಹಾಗೂ ಗ್ರಾಹಕರ ವಿಶ್ವಾಸ ಹಾಗೂ ಸಹಕಾರದಿಂದ, ಈ ನಿಮ್ಮ ಬ್ಯಾಂಕು ವರದಿ ಸಾಲಿನಲ್ಲಿ ಬ್ಯಾಂಕಿನ ವ್ಯವಹಾರಗಳನ್ನು ಸುವ್ಯವಸ್ಥಿತವಾಗಿ ನಡೆಸಿಕೊಂಡು ಬಂದು ಉತ್ತಮ ಆರ್ಥಿಕ ಫಲಿತಾಂಶಗಳನ್ನು ಗಳಿಸಿರುತ್ತದೆ. ಬ್ಯಾಂಕಿನ ಪ್ರಗತಿಗೆ ಕಾರಣರಾದ ನಿರ್ದೇಶಕ ಮಂಡಲಿಗೆ, ಸಕಲ ಸದಸ್ಯರಿಗೆ, ಗ್ರಾಹಕರಿಗೆ, ಹಾಗೂ ಸಂಘ ಸಂಸ್ಥೆಗಳಿಗೆ, ನಮ್ಮ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತಾ, ಇದೇ ಅಭಿಮಾನ, ವಿಶ್ವಾಸ ಹಾಗೂ ಸಹಕಾರ ಯಾವತ್ತೂ ಇದೇ ರೀತಿ ಬ್ಯಾಂಕಿಗೆ ಲಭಿಸುತ್ತಿರಲಿ ಎಂದು ಆಶಿಸುತ್ತೇನೆ.

* * * * * * * *

**ವಿಷಯ 3 : 2022–23ನೇ ಸಾಲಿನ ಆಡಳಿತ ಮಂಡಲಿಯ ವಾರ್ಷಿಕ ವರದಿಯನ್ನು ಪರಿಶೀಲಿಸಿ ಅನುಮೂದಿಸುವುದು**

**ಟಿಪ್ಪಣಿ :** ಬ್ಯಾಂಕಿನ ವಾರ್ಷಿಕ ಮಹಾಸಭೆಗೆ ತಮ್ಮೆಲ್ಲರನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ಬ್ಯಾಂಕಿನ ವಾರ್ಷಿಕ ವರದಿಯನ್ನು ತಮ್ಮ ಪರಿಶೀಲನೆ ಹಾಗೂ ಅನುಮೋದನೆಗೆ ಈ ಕೆಳಗಿನಂತೆ ಮಂಡಿಸುತ್ತೇವೆ.

**ಸದಸ್ಯತ್ವ :**

ದಿನಾಂಕ 31–3–2022ಕ್ಕೆ ಬ್ಯಾಂಕು 2499 ಸದಸ್ಯರನ್ನು ಹೊಂದಿದ್ದು ಷೇರು ಬಂಡವಾಳ ರೂ. 82 ಲಕ್ಷ 49 ಸಾವಿರ ಆಗಿತ್ತು ವರದಿ ವರ್ಷದಲ್ಲಿ 26 ಜನ ಹೊಸ ಸದಸ್ಯರು ಸೇರ್ಪಡೆಯಾಗಿ ಕಾರಣಾಂತರದಿಂದ 25 ಜನರ ಸದಸ್ಯತ್ವ ರದ್ದಾಗಿ 31–3–2023ಕ್ಕೆ ಬ್ಯಾಂಕು ಒಟ್ಟು 2500 ಜನ ಸದಸ್ಯರನ್ನು ಹೊಂದಿ ರೂ. 91 ಲಕ್ಷ 26 ಸಾವಿರ ಷೇರು ಬಂಡವಾಳ ಹೊಂದಿರುತ್ತದೆ.

**ನಿಧಿಗಳು :**

31–03–2022ಕ್ಕೆ ಬ್ಯಾಂಕಿನ ಒಟ್ಟು ಸ್ವಂತ ನಿಧಿಗಳು ರೂ. 582.81 ಲಕ್ಷ ಇದ್ದು, ವರದಿ ಸಾಲಿನಲ್ಲಿ ರೂ. 48.60 ಲಕ್ಷಗಳಷ್ಟು ಹೆಚ್ಚಾಗಿ 31–3–2023 ಕ್ಕೆ ಬ್ಯಾಂಕಿನ ಒಟ್ಟು ಸ್ವಂತ ನಿಧಿಗಳು ರೂ. 631.41 ಲಕ್ಷಗಳಷ್ಟು ಇರುತ್ತವೆ.

**ಇತರೆ ಬ್ಯಾಂಕುಗಳ ಸಾಲಗಳು :**

ಈ ಬಾರಿ ಆರ್ ಡಿ ಸಿ ಸಿ ಬ್ಯಾಂಕಿನಿಂದ ಧಾನ್ಯ ಅಡಮಾನ ಸಾಲ ರೂ. 200.00 ಲಕ್ಷಗಳನ್ನು ಪಡೆಯಲಾಗಿದ್ದು, ವರ್ಷಾಂತ್ಯಕ್ಕೆ ಸಂಪೂರ್ಣವಾಗಿ ಮರುಪಾವತಿಸಲಾಗಿದೆ.

**ಠೇವುಗಳು :**

ದಿ. 31–3–2023ಕ್ಕೆ ಬ್ಯಾಂಕಿನ ಒಟ್ಟು ಠೇವುಗಳ ಮೊತ್ತ ರೂ, 60,39,97,994–47 ಇದ್ದು, ಕಳೆದ ವರ್ಷ ಠೇವುಗಳ ಮೊತ್ತ ರೂ. 49,86,61,899–43 ಇತ್ತು, ಅಂದರೇ ಈ ವರ್ಷದಲ್ಲಿ ರೂ. 10,53,36,095–04 ಗಳಷ್ಟು ಹೆಚ್ಚಿಗೆ ಠೇವುಗಳನ್ನು ಪಡೆಯಲಾಗಿದೆ ಇದರಿಂದ ಬ್ಯಾಂಕಿನ ಮೇಲೆ ಠೇವುದಾರರ ವಿಶ್ವಾಸ ಹಾಗೂ ನಂಬಿಕೆ ಧೃಢವಾಗಿರುವದು ಸುಸ್ಪಷ್ಟ ಹಾಗೂ ಸಂತೋಷದ ಸಂಗತಿ, ಠೇವಣಿಗಳ ಮೇಲೆ ಆಕರ್ಷಕ ಬಡ್ಡಿ ದರಗಳ ಜೊತೆ ಹಿರಿಯ ನಾಗರೀಕರಿಗೆ ಅವರ ಠೇವಣಿಗಳ ಮೇಲೆ ಶೇ0.5% ರಷ್ಟು ಹೆಚ್ಚಿನ ಬಡ್ಡಿ ದರವನ್ನು ನೀಡಲಾಗುತ್ತಿದೆ ಮುಂಬರುವ ವರ್ಷದಲ್ಲಿ ಠೇವಣಿಗಳ ಶೇಖರಣೆಯಲ್ಲಿ ಇನ್ನೂ ಹೆಚ್ಚಿನ ಪ್ರಗತಿ ಸಾಧಿಸಲು ತಮ್ಮೆಲ್ಲರ ಸಹಕಾರ ಮುಂದುವರೆಯುತ್ತದೆ ಎಂದು ಆಶಿಸುತ್ತೇನೆ. ಗ್ರಾಹಕರ ರೂ. 5.00 ಲಕ್ಷದ ವರೆಗಿನ ಠೇವುಗಳು ಭಾರತೀಯ ರಿಝರ್ವ್ ಬ್ಯಾಂಕಿನ ಅಂಗ ಸಂಸ್ಥೆಯಾದ ಠೇವು ವಿಮಾ ನಿಗಮ (DICGC) ಮುಂಬಯಿ ಇವರ ಠೇವು ವಿಮಾ ಯೋಜನೆಗೆ ಒಳಪಟ್ಟಿದ್ದು, ವರದಿ ಸಾಲಿನಲ್ಲಿ ರೂ. 7,51,848–75 ಯನ್ನು ವಿಮಾ ವಂತಿಕೆಯಾಗಿ ಪಾವತಿ ಮಾಡಲಾಗಿರುತ್ತದೆ.

**ದುಡಿಯುವ ಬಂಡವಾಳ :**

ಕಳೆದ ವರ್ಷದ ಅಂತ್ಯಕ್ಕೆ ರೂ. 5863.54 ಲಕ್ಷ ದುಡಿಯುವ ಬಂಡವಾಳ ಹೊಂದಿದ್ದು. ಈ ಸಾಲಿನಲ್ಲಿ ರೂ.1177.42 ಲಕ್ಷ ಹೆಚ್ಚಾಗಿ ದಿನಾಂಕ 31–3–2023ಕ್ಕೆ ಬ್ಯಾಂಕಿನ ಒಟ್ಟು ದುಡಿಯುವ ಬಂಡವಾಳವು ರೂ. 7040.96 ಲಕ್ಷ ಇರುತ್ತದೆ.

**ಜಮಾ ಖರ್ಚು ಹಾಗೂ ಲಾಭಹಾನಿ :**

ವರದಿ ವರ್ಷದ ಅವಧಿಯಲ್ಲಿ ಬ್ಯಾಂಕು ಒಟ್ಟು ರೂ. 659.67 ಕೋಟಿಯಷ್ಟು ಜಮಾ ಮತ್ತು ಖರ್ಚು ವ್ಯವಹಾರ ಮಾಡಿದ್ದು ಲಾಭ – ಹಾನಿ ಪತ್ರಿಕೆ ಅನುಸಾರವಾಗಿ ಆದಾಯ ತೆರಿಗೆ ಪಾವತಿಸಿದ ನಂತರ ಈ ವರ್ಷದ ಲಾಭ ರೂ. 60,06,914–14 ಆಗಿರುತ್ತದೆ.

**ಪ್ರವಾಹಿಧನ ಹಾಗೂ ಸ್ಥಿರ ಸೊತ್ತು ಶಿಲ್ಕು (ಹೂಡಿಕೆಗಳು) :**

ರಿಝರ್ವ ಬ್ಯಾಂಕಿನ ನಿಯಮಗಳಿಗನುಗುಣವಾಗಿ ಪ್ರವಾಹಿ ಧನ (ಕ್ಯಾಷ್ ರಿಜರ್ವ್) ಹಾಗೂ ಸ್ಥಿರ ಸೊತ್ತು (ಲಿಕ್ವಿಡ್ ಅಸೆಟ್)ಗಳನ್ನು ಪ್ರಮಾಣಕ್ಕನುಸರಿಸಿ ಕಾಯ್ದುಕೊಂಡು ಬರಲಾಗಿದೆ. ವರ್ಷದ ಕೊನೆಗೆ ಕೈ ಶಿಲ್ಕು ರೂ. 1,03,27,025.00 ಇದ್ದು ಬೇರೆ ಬೇರೆ ಬ್ಯಾಂಕುಗಳಲ್ಲಿ ನಾವು ತೊಡಗಿಸಿದ ಚಾಲ್ತಿ ಖಾತೆಯ ಹಣವು ರೂ. 4,12,54,770.31 ಇರುತ್ತದೆ. ಹಾಗೂ ಹೂಡಿಕೆಗಳು ಈ ಕೆಳಗಿನಂತಿರುತ್ತದೆ.

| | | |
|---|---|---|
| 1) ಭಾರತ ಸರ್ಕಾರದ ಬಾಂಡುಗಳಲ್ಲಿ | ರೂ. | 15,62,51,211–00 |
| 2) ಆರ್.ಡಿ.ಸಿ.ಸಿ. ಬ್ಯಾಂಕ್ ನಿ., ಗಂಗಾವತಿ | ರೂ. | 2,34,87,590–20 |
| 3) ಶೇರು ಖಾತೆ ಆರ್.ಡಿ.ಸಿ.ಸಿ.ಬ್ಯಾಂಕ್ ನಿ., | ರೂ. | 36,040–00 |
| 4) ಐ.ಡಿ.ಬಿ.ಐ ಬ್ಯಾಂಕ್ | ರೂ. | 1,14,80,564–00 |
| **ಒಟ್ಟು** | **ರೂ.** | **19,12,55,405–00** |

**ಸಾಲಗಳು ಹಾಗೂ ಮುಂಗಡಗಳು :**

ಈ ವರ್ಷದ ಆರಂಭಕ್ಕೆ ರೂ. 33,85,68,902–47 ಬರತಕ್ಕ ಸಾಲಗಳಿದ್ದು ವರದಿ ಸಾಲಿನಲ್ಲಿ ರೂ. 68,78,07,699–10 ಸಾಲ ವಿತರಿಸಿದ್ದು ರೂ. 58,89,19,088–70 ಗಳಷ್ಟು ವಸೂಲಾತಿಯಾಗಿ ವರ್ಷಾಂತ್ಯಕ್ಕೆ ಒಟ್ಟು ಬರತಕ್ಕ ಸಾಲಗಳ ಮೊತ್ತ ರೂ. 43,74,57,512–85 ಇದ್ದು, ಇದರ ಪೈಕಿ ಆದ್ಯತಾ ವಲಯಕ್ಕೆ ಕೊಟ್ಟ ಸಾಲ ರೂ. 4248.02 ಲಕ್ಷ ಇದ್ದು ಇದು ಒಟ್ಟು ಬರತಕ್ಕ ಸಾಲದ ರಕಮಿಗೆ ಶೇ 97.11% ರಷ್ಟು ಆಗುತ್ತದೆ. ಇದರ ಪೈಕಿ ದುರ್ಬಲ ವರ್ಗದವರಿಗೆ ಹಾಗೂ ಮಹಿಳೆಯರಿಗೆ ಕೊಟ್ಟ ಸಾಲ ರೂ. 1148.86 ಲಕ್ಷ ಇದ್ದು ಇದು ಆದ್ಯತಾ ವಲಯಕ್ಕೆ ಕೊಟ್ಟ ಸಾಲದ ರಕಮಿಗೆ ಶೇ 27.04% ಇರುತ್ತದೆ.

**ಮುದ್ದತ್ತು ಮೀರಿದ ಸಾಲಗಳು :**

ದಿ. 31–03–2022ಕ್ಕೆ 7 ಖಾತೆಗಳಿಂದ ರೂ. 11.50 ಲಕ್ಷಗಳು ಅನುತ್ಪಾದಕ ಆಸ್ತಿಗಳಾಗಿರುತ್ತವೆ. ಈ ಮೊತ್ತವು ಬ್ಯಾಂಕಿಗೆ ಬರತಕ್ಕ ಒಟ್ಟು ಸಾಲದ ಮೊತ್ತಕ್ಕೆ ಶೇ 0.34% ರಷ್ಟಾಗಿತ್ತು. ಆದರೇ, 31–3–2023 ಕ್ಕೆ ಒಟ್ಟು ಬರತಕ್ಕ ಸಾಲಗಳ ಪೈಕಿ ಒಟ್ಟು 3 ಖಾತೆಗಳಿಂದ ಒಟ್ಟು ರೂ. 20.21 ಲಕ್ಷಗಳ ಮೊತ್ತವು ಅನುತ್ಪಾದಕ ಆಸ್ತಿಗಳಾಗಿರುತ್ತದೆ. ಈ ಮೊತ್ತವು ಬ್ಯಾಂಕಿಗೆ ಬರತಕ್ಕ ಒಟ್ಟು ಸಾಲದ ಮೊತ್ತಕ್ಕೆ ಶೇ 0.46% ರಷ್ಟಾಗಿರುತ್ತದೆ. ಆಡಳಿತ ಮಂಡಲಿ ಹಾಗೂ ಸಿಬ್ಬಂದಿಯವರ ನಿರಂತರ ಪ್ರಯತ್ನದ ಹೊರತಾಗಿಯೂ ಈ ವರ್ಷ ಅನುತ್ಪಾದಕ ಆಸ್ತಿಗಳಲ್ಲಿ ಅಲ್ಪ ಪ್ರಮಾಣದ ಏರಿಕೆಯಾಗಿರುತ್ತದೆ. ಸಾಲಗಾರರು ಹಾಗೂ ಜಾಮೀನುದಾರು ನಿಗದಿತ ಸಮಯದೊಳಗೆ ಸಾಲ ಮರುಪಾವತಿಸಿ ತಮ್ಮ ಸಂಪೂರ್ಣ ಸಹಕಾರ ನೀಡಬೇಕೆಂದು ವಿನಂತಿಸುತ್ತೇವೆ.

**ಬಂಡವಾಳ ಪರ್ಯಾಪ್ತ ಅನುಪಾತ (CRAR)**

ಪಟ್ಟಣ ಸಹಕಾರ ಬ್ಯಾಂಕುಗಳ ಆರ್ಥಿಕ ದೃಢತೆಯನ್ನು ಪರೀಕ್ಷಿಸುವ ಸಲುವಾಗಿ ಭಾರತೀಯ ರಿಝರ್ವ್ ಬ್ಯಾಂಕು, ಬಂಡವಾಳ ಪರ್ಯಾಪ್ತ ಅನುಪಾತವನ್ನು (CRAR) ನಿಗದಿಪಡಿಸಿದ್ದು ಅದರಂತೆ ಪಟ್ಟಣ ಸಹಕಾರ ಬ್ಯಾಂಕುಗಳು ಕನಿಷ್ಠ ಶೇ 9%ರ ಅನುಪಾತವನ್ನು ಕಾಯ್ದುಕೊಳ್ಳಬೇಕಾಗಿರುತ್ತದೆ. ಪ್ರಸಕ್ತ ವರ್ಷಾಂತ್ಯಕ್ಕೆ ಬ್ಯಾಂಕಿನ ಬಂಡವಾಳ ಪರ್ಯಾಪ್ತ ಅನುಪಾತವು ಶೇ 14.31 % ಇದ್ದು ಇದು ನಮ್ಮ ಬ್ಯಾಂಕಿನ ಸದೃಢತೆಯನ್ನು ತಿಳಿಸುತ್ತದೆ.

**ವ್ಯವಹಾರದ ವೇಳೆ :**

ಬ್ಯಾಂಕಿನ ವ್ಯವಹಾರದ ವೇಳೆಯು ಇತರ ಬ್ಯಾಂಕಿನ ವೇಳೆಗೆ ಭಿನ್ನವಾಗಿದ್ದು. ಸದಸ್ಯರ ಮತ್ತು ಗ್ರಾಹಕರ ಹಿತದೃಷ್ಟಿಯಿಂದ ಬ್ಯಾಂಕಿನ ವ್ಯವಹಾರವು ಮುಂಜಾನೆ 10–30 ರಿಂದ ಮಧ್ಯಾಹ್ನ 2–30ರವರೆಗೆ ಹಾಗೂ ಮಧ್ಯಾಹ್ನ 4–00 ರಿಂದ ಸಾಯಂಕಾಲ 5–00 ಗಂಟೆಯ ವರೆಗೆ ಇರುತ್ತದೆ. ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ಪ್ರಾರ್ಥನೆ ಹಾಗೂ ಬ್ಯಾಂಕಿನಿಂದ ದೇಶದ, ರಾಜ್ಯದ ಪ್ರಮುಖ ನಗರಗಳಿಗೆ ಡಿ.ಡಿ. ಆರ್.ಟಿ.ಜಿ.ಎಸ್./ಎನ್.ಇ.ಎಫ್.ಟಿ. ಕೊಡುವ ಐ.ಎಂ.ಪಿ.ಎಸ್ / ಎಟಿಎಂ ಸೌಲಭ್ಯವಿರುವುದರಿಂದ ಈ ಸೇವೆಯನ್ನು ಎಲ್ಲರೂ ಪಡೆದುಕೊಳ್ಳಲು ವಿನಂತಿ.

**ನಿರ್ದೇಶಕ ಮಂಡಲಿ ಸಭೆಗಳು:**

2022–23ನೇ ಸಾಲಿನಲ್ಲಿ 11 ನಿರ್ದೇಶಕರ ಮಂಡಲಿಯ ಸಭೆಗಳು ಜರುಗಿರುತ್ತವೆ ಈ ಎಲ್ಲಾ ಸಭೆಗಳಿಗೆ ನಿರ್ದೇಶಕರು ಹಾಜರಾಗಿ ಬ್ಯಾಂಕಿನ ಕಾರ್ಯ ಕಲಾಪಗಳನ್ನು ಆಸಕ್ತಿ ಹಾಗೂ ಶ್ರದ್ಧೆಯಿಂದ ನಿರ್ವಹಿಸಿದ್ದಕ್ಕಾಗಿ ಮತ್ತು ಬ್ಯಾಂಕಿನ ಸರ್ವತೋಮುಖ ಬೆಳವಣಿಗೆಗಾಗಿ ಶ್ರಮಿಸಿದ ಎಲ್ಲಾ ನಿರ್ದೇಶಕರಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**ಲೆಕ್ಕ ತಪಾಸಣೆ ಹಾಗೂ ಪರಿವೀಕ್ಷಣೆ :**

ವರದಿ ಸಾಲಿನಲ್ಲಿ ಪರಿವಿಕ್ಷಣೆ ನಡೆದಿರುವುದಿಲ್ಲಾ.

ಸನ್ 2022–23ನೇ ಸಾಲಿನ ಶಾಸನಬದ್ಧ ಲೆಕ್ಕ ತಪಾಸಣೆಯನ್ನು ಶ್ರೀ ಗಜಾನನ ನೀಲಾಕರಿ, ಚಾರ್ಟರ್ಡ ಅಕೌಂಟೆಂಟ್, ಮೇ:ನೀಲಾಕರಿ ಮಹಿಂದ್ರಕರ್ ಅಸೋಸಿಯೇಟ್ಸ್, ಹುಬ್ಬಳ್ಳಿ ಇವರು ನಿರ್ವಹಿಸಿ ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆ ಹಾಗೂ ಭಾರತೀಯ ರಿಝರ್ವ ಬ್ಯಾಂಕಿನ ಮಾನದಂಡಗಳ ಮೇರೆಗೆ ಎಲ್ಲಾ ವಿಭಾಗಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಉತ್ತಮ ಮಾರ್ಗದರ್ಶನ ಮಾಡಿರುತ್ತಾರೆ. ಆಡಿಟ್ ವರ್ಗಿಕರಣದಲ್ಲಿ ಬ್ಯಾಂಕ್ 'ಅ' ವರ್ಗಿಕರಣವನ್ನು ಪಡೆದಿರುತ್ತದೆ. ಶ್ರೀಯುತರು ಲೆಕ್ಕ ಪರಿಶೋಧನೆಯಲ್ಲಿ ಗುರುತಿಸಿದ ನ್ಯೂನ್ಯತೆಗಳನ್ನು ಸರಿಪಡಿಸಿಕೊಂಡು ಅವರ ಮಾರ್ಗದರ್ಶನಗಳನ್ನು ಅಳವಡಿಸಿಕೊಳ್ಳಲಾಗಿದೆಯೆಂದು ಸಭೆಗೆ ತಿಳಿಸಬಯಸುತ್ತೇವೆ. ಮಾನ್ಯರಿಗೆ ಬ್ಯಾಂಕಿನ ಪರವಾಗಿ ವಂದನೆಗಳನ್ನು ಸಲ್ಲಿಸುತ್ತಿದ್ದೇವೆ.

**ಸಿಬ್ಬಂದಿ ವರ್ಗ :**

ಬ್ಯಾಂಕಿನ ಸರ್ವತೋಮುಖ ಬೆಳವಣಿಗೆಗಾಗಿ ಶ್ರಮವಹಿಸಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ಸದಸ್ಯರ ಸೇವೆ ಅದರ ಬೆಳವಣಿಗೆಯಲ್ಲಿ ಗಣನೀಯ. ಅವರು ಇನ್ನೂ ಹೆಚ್ಚಿನ ನಿಷ್ಠೆ, ಪರಿಶ್ರಮಪಟ್ಟು ಹಾಗೂ ಪ್ರಾಮಾಣಿಕತನದಿಂದ ಸೇವೆ ಸಲ್ಲಿಸಿ ಬ್ಯಾಂಕು ಇನ್ನೂ ಹೆಚ್ಚಿನ ಪ್ರಗತಿ ಹೊಂದುವಲ್ಲಿ ಭಾಗಿಗಳಾಗಲಿ ಎಂಬುದೇ ನಮ್ಮ ಬಯಕೆ.

**ಕಾರ್ಯಯೋಜನೆ :**

ಮುಂಬರುವ ಆರ್ಥಿಕ ವರ್ಷದಲ್ಲಿ ರೂ. 700.00 ಕೋಟಿಯಷ್ಟು ಬ್ಯಾಂಕಿಂಗ್ ವ್ಯವಹಾರವನ್ನು, ರೂ. 65.00 ಕೋಟಿ ಠೇವಣಿ ಸಂಗ್ರಹ, ರೂ. 46.00 ಕೋಟಿ ವರೆಗೆ ಸಾಲ ವಿತರಣೆ, ಅನುತ್ಪಾದಕ ಆಸ್ತಿಯನ್ನು ಶೂನ್ಯಕ್ಕೆ ಇಳಿಸುವ ಗುರಿ ಹೊಂದಲಾಗಿದೆ.

**ಅಭಿನಂದನೆಗಳು :**

ಕಾಲಕಾಲಕ್ಕೆ ಬ್ಯಾಂಕಿನ ಅಭಿವೃದ್ಧಿಗಾಗಿ ಲೆಕ್ಕ ಪತ್ರಗಳನ್ನು ಮತ್ತು ನಿಯಮಗಳ ಪಾಲನೆ ಬಗ್ಗೆ ಸೂಕ್ತ ಮಾರ್ಗದರ್ಶನ ನೀಡಿದ ಭಾರತೀಯ ರಿಝರ್ವ್ ಬ್ಯಾಂಕಿನ ಅಧಿಕಾರಿಗಳಿಗೆ, ಸಹಕಾರ ಸಂಘಗಳ ನಿಬಂಧಕರು, ಬೆಂಗಳೂರು ಇವರಿಗೆ ಮತ್ತು ಸಹಕಾರ ಸಂಘಗಳ ಜಂಟಿ ನಿಬಂಧಕರು, ಕಲಬುರಗಿ ಪ್ರಾಂತ, ರಾಯಚೂರು ಇವರಿಗೆ ಮತ್ತು ಮಾನ್ಯ ಸಹಕಾರ ಸಂಘಗಳ ಉಪನಿಬಂಧಕರು, ಮಾನ್ಯ ಸಹಾಯಕ ನಿಬಂಧಕರು ಸಹಕಾರ ಸಂಘಗಳು ಕೊಪ್ಪಳ ಮತ್ತು ಮಾನ್ಯ ಸಹಕಾರ ಅಭಿವೃದ್ಧಿ ಅಧಿಕಾರಿಗಳು, ಗಂಗಾವತಿ ಇವರಿಗೆ ಹಾಗೂ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ ಉಪನಿರ್ದೇಶಕರು ಮತ್ತು ಸಹಾಯಕ ನಿರ್ದೇಶಕರು ಹಾಗೂ ಹಿರಿಯ ಲೆಕ್ಕಪರಿಶೋಧಕರು ಹಾಗೂ ಬ್ಯಾಂಕಿನ ಕಾರ್ಯನಿರ್ವಹಣೆಯಲ್ಲಿ ಕಾಲಕಾಲಕ್ಕೆ ಸೂಕ್ತ ಮಾರ್ಗದರ್ಶನ ನೀಡಿದ ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ಬೆಂಗಳೂರು ಇದರ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರಿಗೆ ನಮ್ಮ ಹೃತ್ಪೂರ್ವಕ ಅಭಿನಂದನೆಗಳು ಹಾಗೂ ನಮ್ಮ ಬ್ಯಾಂಕಿನ ಅಭಿವೃದ್ಧಿಯಲ್ಲಿ ವಿಶೇಷವಾಗಿ ಸಹಕರಿಸಿ ಸಕಾಲಕ್ಕೆ ನಮ್ಮ ಬ್ಯಾಂಕಿಗೆ ಧಾನ್ಯ ಅಡವು ಸಾಲ ಮಂಜೂರು ಮಾಡಿರುವ ರಾಯಚೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು, ವ್ಯವಸ್ಥಾಪಕ ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗದವರಿಗೆ ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸುತ್ತಾ, ಇದೇ ಸಹಕಾರ ಮುಂದುವರೆಯಲೆಂದು ಆಶಿಸುತ್ತೇನೆ. ರಾಯಚೂರು ಹಾಗೂ ಗಂಗಾವತಿ ಶಾಖೆಯ ಡಿ.ಸಿ.ಸಿ.ಬ್ಯಾಂಕಿನ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರಿಗೆ ನಮ್ಮ ಬ್ಯಾಂಕಿನ ಪರವಾಗಿ ವಂದನೆಗಳನ್ನು ಸಲ್ಲಿಸುತ್ತೇನೆ.

ಬ್ಯಾಂಕಿನ ದಿನ ನಿತ್ಯದ ವ್ಯವಹಾರದಲ್ಲಿ ನಮ್ಮ ಸಿಬ್ಬಂದಿ ವರ್ಗದವರೊಡಣೆ ಸಹಕರಿಸುತ್ತಿರುವ ಗಂಗಾವತಿಯ ಎಕ್ಸಿಸ್ ಬ್ಯಾಂಕ್, ಆರ್.ಡಿ.ಸಿ.ಸಿ.ಬ್ಯಾಂಕ್ ಮುಖ್ಯ ಕಛೇರಿ ರಾಯಚೂರು ಹಾಗೂ ಗಂಗಾವತಿ ಶಾಖೆ ಮತ್ತು ಐಡಿಬಿಐ ಬ್ಯಾಂಕ್, ಗಂಗಾವತಿ ಶಾಖೆ ಮತ್ತು ಹುಬ್ಬಳ್ಳಿ ಶಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರಿಗೆ ಮತ್ತು ಸ್ಥಳೀಯ ಕೆನರಾ ಬ್ಯಾಂಕ್, ಸಿಬ್ಬಂದಿ ವರ್ಗದವರಿಗೆ ನಮ್ಮ ಹೃತ್ಪೂರ್ವಕ ಧನ್ಯವಾದಗಳು.

ನಮ್ಮ ನಿರ್ದೇಶಕ ಮಂಡಲಿಯು, ನಮ್ಮ ಗ್ರಾಹಕರಿಗೆ, ಠೇವುದಾರರಿಗೆ, ಶೇರುದಾರರಿಗೆ ಅವರ ಹಾರ್ದಿಕ ಬೆಂಬಲಕ್ಕೆ ಆತ್ಮೀಯ ಕೃತಜ್ಞತೆಯನ್ನು ಸಮರ್ಪಿಸುತ್ತಾ. ಇತರ ಬ್ಯಾಂಕುಗಳ ಸಹಕಾರ, ಸಹಾಯ ಹಾಗೂ ಸುದ್ದಿ ಮಾಧ್ಯಮದವರ ಪ್ರೋತ್ಸಾಹಗಳಿಗೆ ತನ್ನ ಕೃತಜ್ಞತೆಯನ್ನು ಅರ್ಪಿಸುತ್ತದೆ. ಭವಿಷ್ಯದಲ್ಲಿಯೂ ಇದೇ ರೀತಿಯ ಸಹಕಾರ, ಪ್ರೋತ್ಸಾಹವನ್ನು ನೀಡುತ್ತಾರೆಂದು ಆಶಿಸಿ, ಬ್ಯಾಂಕಿನ ಈ ಅಭೂತ ಪೂರ್ವ ಬೆಳವಣಿಗೆಗೆ ವಿಶೇಷವಾಗಿ ಶ್ರಮಿಸಿದ ಬ್ಯಾಂಕಿನ ಸಂಸ್ಥಾಪಕ ಆಡಳಿತ ಮಂಡಳಿ, ಹಿಂದಿನ ಮತ್ತು ಇಂದಿನ ಆಡಳಿತ ಮಂಡಲಿ ಸದಸ್ಯರ ಸಮರ್ಪಣಾ ಮನೋಭಾವ ಮತ್ತು ಕಳಕಳಿಯ ಸೇವೆಯನ್ನು ಹೃತ್ಪೂರ್ವಕವಾಗಿ ಶ್ಲಾಘಿಸುತ್ತೇನೆ.

**"ಸಹಕಾರದಿಂದ ಸುಖ ಸಮೃದ್ಧಿ "**

**ಶ್ರೀ ಚಿಲಕೂರಿ ವೆಂಕಟರಾಮಕೃಷ್ಣ**

**ಅಧ್ಯಕ್ಷರು ಶ್ರೀರಾಮನಗರ ಪಟ್ಟಣ ಸಹಕಾರ ಬ್ಯಾಂಕ್ ನಿ.,**

**ವಿಷಯ 4 : 2022–23ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ ಮತ್ತು ಮಂಡಲಿ ಅನುಪಾಲನಾ ವರದಿಯನ್ನು ಪರಿಶೀಲಿಸುವುದು.**

**ಟಿಪ್ಪಣಿ** : ಸನ್ 2022–23ನೇ ಸಾಲಿನ ಬ್ಯಾಂಕಿನ ಲೆಕ್ಕ ಪರಿಶೋಧನೆಗೊಂಡ ಆರ್ಥಿಕ ತಖ್ತೆಗಳನ್ನು ಪುಟ ಸಂಖ್ಯೆ 16 ರಿಂದ 25 ರಲ್ಲಿ ಮತ್ತು ಆಡಳಿತ ಮಂಡಲಿಯು ನೀಡಿದ ಅನುಪಾಲನಾ ವರದಿಯನ್ನು ಪುಟ ಸಂಖ್ಯೆ 15 ರಲ್ಲಿ ಲಗತ್ತಿಸಿದ್ದು ಅವುಗಳನ್ನು ಪರಿಶೀಲಿಸಿ ಒಪ್ಪಿಗೆ ನೀಡಲು ಮಂಡಿಸಿದೆ.

**ವಿಷಯ 5 : ಸನ್ 2022–23 ನೇ ಸಾಲಿನ ನಿವ್ವಳ ಲಾಭದ ವಿಲೇವಾರಿ,**

**ಟಿಪ್ಪಣಿ** : ಬ್ಯಾಂಕಿನ ಪೋಟ ನಿಯಮ 103 ರ ಪ್ರಕಾರ ಮತ್ತು ರಿಝರ್ವ್ ಬ್ಯಾಂಕಿನ ಇತ್ತೀಚಿನ ನಿರ್ದೇಶನಗಳಿಗನುಗುಣವಾಗಿ ಈ ಕೆಳಗಿನಂತೆ ಲಾಭದ ವಿಲೇವಾರಿ ಮಾಡಲು ಆಡಳಿತ ಮಂಡಲಿ ಸಭೆಯು ಶಿಫಾರಸ್ಸು ಮಾಡಿದ್ದು ತಾವೆಲ್ಲರೂ ಪರಿಶೀಲಿಸಿ ತಮ್ಮ ಒಪ್ಪಿಗೆ ನೀಡಲು ಕೋರುತ್ತೇವೆ.

**ಲಾಭ ವಿಲೇವಾರಿ ವಿವರ**

| | | | |
|---|---|---|---|
| ಕಾಯ್ದಿಟ್ಟ ನಿಧಿ | 25% | : | 15,01,729–14 |
| ಸಹಕಾರ ಶಿಕ್ಷಣ ನಿಧಿ | 2% | : | 90,104–00 |
| ಡಿವಿಡೆಂಡ್ | 15% | : | 12,73,460–00 |
| | **ಒಟ್ಟು** | | **28,65,293–14** |

**ಉಳಿದ ಲಾಭ ರೂ 31,41,621–00 ಈ ಕೆಳಗಿನಂತೆ ತೆಗೆದಿರಿಸಲಾಗಿದೆ.**

| | | | |
|---|---|---|---|
| ಮುಳುಗುವ ಹಾಗೂ ಸಂಶಯುಕ್ತ ಸಾಲ ನಿಧಿ | 20% | : | 6,28,324–00 |
| ಕಟ್ಟಡ ನಿಧಿ | 35% | : | 10,99,568–00 |
| ಸದಸ್ಯರ ಕ್ಷೇಮ ನಿಧಿ | 2% | : | 62,833–00 |
| ಪ್ರಚಾರ ನಿಧಿ | 1% | : | 31,416–00 |
| ಧರ್ಮಾರ್ಥ ನಿಧಿ | 1% | : | 31,416–00 |
| ಲಾಭಾಂಶ ಸರಿಪಡಿಸುವ ನಿಧಿ | 5% | : | 1,57,081–00 |
| ನೌಕರರ ಕ್ಷೇಮ ನಿಧಿ | 10% | : | 3,14,162–00 |
| ಮಹೋತ್ಸವ ನಿಧಿ | 5% | : | 1,57,081–00 |
| ಸಹಕಾರ ಮಹಾಮಂಡಳ ಅಭಿವೃದ್ಧಿ ನಿಧಿ | 1% | : | 31,416–00 |
| ಉತ್ಪಾದಕ ಆಸ್ತಿಗಳ ಮೇಲಿನ ಅವಕಾಶ | 10% | : | 3,14,162–00 |
| ಹೂಡಿಕೆಗಳ ಏರಿಳಿತ ನಿಧಿ | 5% | : | 1,57,081–00 |
| ಹೂಡಿಕೆಗಳ ಸವಕಳಿ ನಿಧಿ | 5% | : | 1,57,081–00 |
| | **ಒಟ್ಟು** | **:** | **60,06,914–14** |

**ಡಿವಿಡೆಂಡ್ (ಲಾಭಾಂಶ)**

ಸದಸ್ಯರಿಗೆ ಶೇ 15 ರಷ್ಟು ಡಿವಿಡೆಂಡ್‌ನ್ನು ಹಂಚಿಕೆ ಮಾಡಲು ನಿರ್ಧರಿಸಿ ಆಡಳಿತ ಮಂಡಲಿ ಸಿಫಾರಸ್ಸು ಮಾಡಿದ್ದು, ತಾವೆಲ್ಲ ಅನುಮೋದಿಸಬೇಕೆಂದು ವಿನಂತಿ.

**ವಿಷಯ 6 : 2023–24ನೇ ಸಾಲಿನ ಬಜೆಟ್‌ನ್ನು ಪರಿಶೀಲಿಸಿ ಅನುಮೋದಿಸುವುದು**

**ಟಿಪ್ಪಣಿ** : ಸನ್ 2023–24ನೇ ಸಾಲಿಗಾಗಿ ಬ್ಯಾಂಕು ರೂಪಿಸಿಕೊಂಡ ಬಜೆಟ್‌ನ್ನು ಈ ಮುಂದಿನ ಪುಟದಲ್ಲಿದ್ದು ಅದನ್ನು ಪರಿಶೀಲಿಸಿ ಅನುಮೋದಿಸಲು ಕೋರುತ್ತೇವೆ.

## ಸನ್ 2023-2024 ನೇ ಸಾಲಿನ ಅಂದಾಜು ಮುಂಗಡ ಪತ್ರ (ಬಜೆಟ್)

| ವೆಚ್ಚಗಳು | | ಆದಾಯಗಳು | |
|---|---|---|---|
| ಠೇವಣಿಗಳ ಮೇಲಿನ ಬಡ್ಡಿ | 4,40,00,000.00 | ಗುಂತಾಯಿಕೆಗಳ ಮೇಲಿನ ಬಡ್ಡಿ | 1,22,00,000.00 |
| ಸಿಬ್ಬಂದಿ ವೇತನ | 66,00,000.00 | | |
| ಬ್ಯಾಂಕಿನ ಸಾಲಗಳ ಮೇಲಿನ ಬಡ್ಡಿ | 5,00,000.00 | | |
| ಮುದ್ರಣ ಹಾಗೂ ಸಾದಿಲ್ವಾರು ವೆಚ್ಚ | 2,00,000.00 | ಸಾಲಗಳ ಮೇಲೆ ಬರಬಹುದಾದ ಬಡ್ಡಿ | 5,60,00,000.00 |
| ಬ್ಯಾಂಕುಗಳಿಗೆ ಕೊಡುವ ಕಮೀಷನ್ | 35,000.00 | | |
| ಪಿಗ್ಮಿ ಏಜಂಟರಿಗೆ ಕೊಡುವ ಕಮೀಷನ್ | 8,75,000.00 | | |
| ಬ್ಯಾಂಕ್ ಆಸ್ತಿಗಳ ಮೇಲೆ ವಿಮಾ ವೆಚ್ಚ | 4,70,000.00 | ಡಿ.ಡಿ. ಹಾಗೂ ಇತರೆ ಕಮಿಷನ್ | 250,000.00 |
| ಭವಿಷ್ಯನಿಧಿಯಲ್ಲಿನ ಬ್ಯಾಂಕಿನ ಭಾಗ | 7,00,000.00 | | |
| ಕಾರ್ಯಾಲಯ ನಿರ್ವಹಣಾ ವೆಚ್ಚ | 12,00,000.00 | | |
| ಠೇವು ವಿಮಾನಿಗಮ ಪ್ರಿಮಿಯಮ್ | 7,50,000.00 | ಇನ್ನಿತರೆ ಮೂಲಗಳಿಂದ ಬರಬಹುದಾದ ಕಮೀಷನ್ | 400,000.00 |
| ಅಂಚೆ ಮತ್ತು ದೂರವಾಣಿ ವೆಚ್ಚ | 85,000.00 | | |
| ಜಾಹಿರಾತು ವೆಚ್ಚ | 85,000.00 | ಸೇವಾ ಶುಲ್ಕ | 5,50,000.00 |
| ಸಿಬ್ಬಂದಿ ವೈದ್ಯಕೀಯ ಭತ್ಯೆ | 18,000.00 | | |
| ಕೋರ್ ಬ್ಯಾಂಕಿಂಗ್ ಬಾಡಿಗೆ | 2,90,000.00 | | |
| ಬ್ಯಾಂಕ್ ಭದ್ರತಾ ಏಜನ್ಸಿ ವೆಚ್ಚ | 1,65,000.00 | | |
| ಸಿಬ್ಬಂದಿ ಆಪದ್ಧನ ಪಾವತಿ | 11,50,000.00 | | |
| ವಿದ್ಯುತ್ ಹಾಗೂ ನೀರಿನ ವೆಚ್ಚ | 2,00,000.00 | | |
| ಇತರೆ ವೆಚ್ಚಗಳು | 2,50,000.00 | | |
| **ಅನಿಶ್ಚಿತ (ಕಾಂಟಿಂಜೆಂಟ್)ಅವಕಾಶಗಳು** | 32,00,000.00 | | |
| ಅಂದಾಜು ಆದಾಯ ತೆರಿಗೆ | 21,00,000.00 | | |
| **ಅಂದಾಜು ಲಾಭ (2023-2024)** | **65,27,000.00** | | |
| **ಒಟ್ಟು** | **6,94,00,000.00** | **ಒಟ್ಟು** | **6,94,00,000.00** |

## 2022-23ನೇ ಸಾಲಿನಲ್ಲಿ ಆದ ಮುಂಗಡ ಪತ್ರಕ್ಕಿಂತ ಹೆಚ್ಚುವರಿ ವೆಚ್ಚದ ಅನುಮೋದನೆ

**ಟಿಪ್ಪಣಿ** : 2022-23 ನೇ ಸಾಲಿನಲ್ಲಿ ಆದ ಮುಂಗಡ ಪತ್ರಕ್ಕಿಂತ ಹೆಚ್ಚುವರಿ ಬಾಬ್ತು ಈ ಕೆಳಕಂಡಂತೆ ಇದ್ದು ಅದನ್ನು ಪರಿಶೀಲಿಸಿ ಅನುಮೋದನೆ ನೀಡಲು ಕೋರುತ್ತೇವೆ

| ಕ್ರ.ಸಂ. | ಖರ್ಚಿನ ಬಾಬ್ತುಗಳು | 2022-2023 ಸಾಲಿನ ಅಂದಾಜು ಖರ್ಚು | 2022-2023 ಸಾಲಿನ ನಿವ್ವಳ ಖರ್ಚು |
|---|---|---|---|
| 1. | ಠೇವಣಿಗಳ ಮೇಲಿನ ಬಡ್ಡಿ | 3,90,00,000-00 | 4,42,01,185-00 |
| 2. | ಕಾರ್ಯಾಲಯ ನಿರ್ವಹಣಾ ವೆಚ್ಚ | 9,50,000-00 | 9,89,132-00 |
| 3. | ಠೇವು ವಿಮಾ ನಿಗಮ ಪ್ರಿಮಿಯಮ್ | 7,00,000-00 | 7,51,848-75 |
| 4. | ಕೋರ್ ಬ್ಯಾಂಕಿಂಗ್ ವೆಚ್ಚ | 2,25,000-00 | 2,65,692-87 |
| 5. | ವಿದ್ಯುತ್ ಹಾಗೂ ನೀರಿನ ವೆಚ್ಚ | 1,60,000-00 | 1,85,909-27 |
| 4. | ಅವಕಾಶಗಳು | 19,50,000-00 | 30,63,514-00 |

**ವಿಷಯ 7 : ನಿರ್ದಿಷ್ಟ ಮತ್ತು ಮೀಸಲು ಮತ್ತು ಇತರೆ ನಿಧಿಗಳನ್ನು ಸೃಜಿಸುವುದು.**

**ಟಿಪ್ಪಣಿ** : ಉಪನಿಯಮಗಳ ಅನ್ವಯ ನಿಧಿಗಳನ್ನು ಸೃಜಿಸಲಾಗಿರುತ್ತದೆ. ಯಾವುದೇ ಹೊಸ ಸೇರ್ಪಡೆಗಳಿರುವುದಿಲ್ಲ.

**ವಿಷಯ 8 : ಮಂಡಲಿಯ ಸದಸ್ಯರ ಮತ್ತು ಕಾರ್ಯನಿರ್ವಾಹಕನ ಸಂಬಂಧಿಗಳು ಸಿಬ್ಬಂದಿಗಳಾಗಿ ನೇಮಕವಾಗಿದ್ದರೆ ಅಂಥ ಸಿಬ್ಬಂದಿಗಳ ಪಟ್ಟಿಯ ಪರಿಶೀಲನೆ.**

**ಟಿಪ್ಪಣಿ** : ಇಂತಹ ಪ್ರಕರಣಗಳು ಇರುವದಿಲ್ಲ.

**ವಿಷಯ 9 : ಬ್ಯಾಂಕಿನ ಉಪ ನಿಯಮಗಳಿಗೆ ತಿದ್ದುಪಡಿ ಮಾಡುವ ಕುರಿತು**

**ಟಿಪ್ಪಣಿ** : ಬ್ಯಾಂಕಿನ ಉಪ ನಿಯಮಗಳಿಗೆ ತಿದ್ದುಪಡಿ / ಸೇರ್ಪಡೆ ಗಳು ಇರುವುದಿಲ್ಲ.

**ವಿಷಯ 10 : ಬ್ಯಾಂಕಿನ ಸದಸ್ಯರು, ಪದಾಧಿಕಾರಿಗಳು ಮತ್ತು ನೌಕರರ ನೀತಿ ಸಂಹಿತೆ ರೂಪಿಸುವ ಬಗ್ಗೆ.**

**ಟಿಪ್ಪಣಿ** : ಬ್ಯಾಂಕಿನ ಸದಸ್ಯರು, ಪದಾಧಿಕಾರಿಗಳು ಮತ್ತು ನೌಕರರ ನೀತಿ ಸಂಹಿತೆಯು ಬ್ಯಾಂಕಿನ ಉಪನಿಯಮಗಳಲ್ಲಿ ರೂಪಿಸಿ ಜಾರಿಯಲ್ಲಿರುತ್ತದೆ.

**ವಿಷಯ 11 : ಬ್ಯಾಂಕಿಗೆ ಸದಸ್ಯರನ್ನು ಸೇರಿಸಿಕೊಂಡ ಹಾಗೂ ಸದಸ್ಯತ್ವದಿಂದ ಸಮಾಪನೆ ಮಾಡಿರುವ ಬಗ್ಗೆ.**

ಟಿಪ್ಪಣಿ : ವರದಿ ಸಾಲಿನ ಆರಂಭಕ್ಕೆ ಬ್ಯಾಂಕು ಒಟ್ಟು 2499 ಜನ ಖಾಯಂ ಸದಸ್ಯರನ್ನು ಹೊಂದಿದ್ದು ವರದಿ ಸಾಲಿನಲ್ಲಿ 26 ಜನ ಹೊಸದಾಗಿ ಸದಸ್ಯತ್ವ ಪಡೆದಿರುತ್ತಾರೆ ಹಾಗೂ ವಿವಿಧ ಕಾರಣಗಳಿಂದ 25 ಜನರ ಸದಸ್ಯತ್ವ ಸಮಾಪನೆಗೊಂಡಿದ್ದು ವರ್ಷಾಂತ್ಯಕ್ಕೆ ಒಟ್ಟು 2500 ಜನ ಸದಸ್ಯರು ಇರುತ್ತಾರೆ. ಹಾಗೂ ವರ್ಷ್ಯಾಂತ್ಯಕ್ಕೆ 37 ಜನ ಸಹಸದಸ್ಯರು ಸೇರ್ಪಡೆಗೊಂಡು 5 ಜನರ ಸಹ ಸದಸ್ಯತ್ವ ಸಮಾಪನೆಗೊಂಡಿದ್ದು ಒಟ್ಟು 406 ಜನ ಸಹಸದಸ್ಯರು ಇರುತ್ತಾರೆ.

**ವಿಷಯ 12 : ಬ್ಯಾಂಕಿನ ಸದಸ್ಯರು ಮತ್ತು ನಿರ್ದೇಶಕರಿಂದ ಬ್ಯಾಂಕಿನ ಸೇವೆಗಳ ಬಳಕೆ ಬಗ್ಗೆ ಪರಿಶೀಲನೆ.**

**ಟಿಪ್ಪಣಿ** : ಬ್ಯಾಂಕಿನ ಪ್ರತಿಯೊಬ್ಬ ಸದಸ್ಯನು ತಮ್ಮ ಹಕ್ಕು ಚಲಾಯಿಸಲು ಬ್ಯಾಂಕಿನ ಉಪವಿಧಿ ಸಂಖ್ಯೆ 20ರ ಪ್ರಕಾರ ನಿಗದಿಪಡಿಸಲಾದ ಕನಿಷ್ಠ ಸೇವೆ ಅಥವಾ ಸೌಲಭ್ಯಗಳನ್ನು (ವಿವರ ಪುಟ ಸಂಖ್ಯೆ 27ರಂತೆ) ಬಳಸಿಕೊಳ್ಳುವುದು ಕಡ್ಡಾಯವಾಗಿರುತ್ತದೆ. ಈ ಸಾಲಿನಲ್ಲಿ ಬ್ಯಾಂಕಿನ ಎಲ್ಲಾ ನಿರ್ದೇಶಕರನ್ನು ಸೇರಿಸಿ ಬ್ಯಾಂಕಿನ ಒಟ್ಟು 2500 ಜನ ಸದಸ್ಯರ ಪೈಕಿ 697 ಜನ ಸದಸ್ಯರು ತಮ್ಮ ಕನಿಷ್ಠ ಸೇವೆಗಳನ್ನು ಉಪಯೋಗಿಸಿಕೊಂಡಿರುತ್ತಾರೆ, ಅದೇ ತರಹ ದಿನಾಂಕ 30-07-2022 ರಂದು ನಡೆದ ಸರ್ವ ಸದಸ್ಯರ ಮಹಾಸಭೆಗೆ 409 ಜನ ಸದಸ್ಯರು ಹಾಜರಾಗಿರುತ್ತಾರೆ.

**ವಿಷಯ 13 : ಬ್ಯಾಂಕಿನ ನಿರ್ದೇಶಕರು ಮತ್ತು ಅವರ ಸಂಬಂಧಿಕರು ಪಡೆದಿರುವ ಸಾಲಗಳ ಪರಿಶೀಲನೆ ಮತ್ತು ಸುಸ್ತಿಯಾಗಿದ್ದಲ್ಲಿ ವಸೂಲಾತಿಗೆ ಕೈಗೊಂಡಿರುವ ಕ್ರಮ**

**ಟಿಪ್ಪಣಿ** : ಇಂತಹ ಪ್ರಕರಣಗಳು ಇರುವದಿಲ್ಲ.

**ವಿಷಯ 14 : ವಿಚಾರಣಾ ಮತ್ತು ಪರಿವೀಕ್ಷಣಾ ವರದಿಯ ಪರಿಶೀಲನೆ, ಮಂಡಲಿಯ ಅನುಪಾಲನಾ ವರದಿಯ ಪರಿಶೀಲನೆ. (ಇದ್ದರೆ)**

**ಟಿಪ್ಪಣಿ** : ವರದಿ ಸಾಲಿನಲ್ಲಿ ಯಾವುದೇ ವಿಚಾರಣಾ ಮತ್ತು ಪರಿವೀಕ್ಷಣೆ ಇರುವದಿಲ್ಲ.

**ವಿಷಯ 15 : 2023–24ನೇ ಸಾಲಿಗೆ ಲೆಕ್ಕ ಪರಿಶೋಧಕರ ನೇಮಕಾತಿ ಮತ್ತು ಆತನಿಗೆ ಕೊಡಬಹುದಾದ ಸಂಭಾವನೆಯ ನಿರ್ಧಾರಣೆ.**

**ಟಿಪ್ಪಣಿ** : ಸನ್2023–24ನೇ ಸಾಲಿನ ಬ್ಯಾಂಕಿನ ಲೆಕ್ಕ ಪರಿಶೋಧನೆಗಾಗಿ ಲೆಕ್ಕಪರಿಶೋಧಕರ ನೇಮಕಕ್ಕಾಗಿ ಮಾನ್ಯ ಭಾರತೀಯ ರಿಝರ್ವ ಬ್ಯಾಂಕಿನ ನಿರ್ದೇಶನ ಸಂ. RBI/2021-22/25 Ref.No.DoS.CO ARG/SEC.01/08.91.001/2021–22 ದಿನಾಂಕ 27–4–2021 ರಂತೆ ಸನ್ನದು ಲೆಕ್ಕ ಪರಿಶೋಧಕರಾಗಿ ಮೇ : ನೀಲಾಕರಿ ಮಹಿಂದ್ರಕರ್ ಅಸೋಸಿಯೆಟ್ಸ್, ಹೆಸರನ್ನು ಬ್ಯಾಂಕಿನ ಆಡಳಿತ ಮಂಡಲಿ ಸಭೆಯಲ್ಲಿ ಚರ್ಚಿಸಿ, ಪ್ರಸ್ತಾವನೆಯನ್ನು ಆರ್.ಬಿ.ಐ ಗೆ ಅನುಮೋದನೆಗಾಗಿ ಕಳುಹಿಸಲಾಗಿದೆ, ಇವರ ನಿರ್ದೇಶನದಂತೆ 2023–24ನೇ ಸಾಲಿಗೆ ಲೆಕ್ಕ ಪರಿಶೋಧಕರ ನೇಮಕಾತಿ ಮತ್ತು ಅವರಿಗೆ ಕೊಡಬಹುದಾದ ಸಂಭಾವನೆಯನ್ನು ನಿರ್ಧರಿಸಲು ಮಹಾಸಭೆಯ ಅನುಮತಿಯನ್ನು ಕೋರಲಾಗಿದೆ. ಭಾರತೀಯ ರಿಝರ್ವ ಬ್ಯಾಂಕಿಗೆ ಅನುಮೋದನೆಗಾಗಿ ಕಳುಹಿಸಲಾದ ಲೆಕ್ಕ ಪರಿಶೋಧಕರ ವಿವರ ಈ ಕೆಳಗೆ ನೀಡಲಾಗಿದೆ.

| Name of the Audit Firm | Reg. No. | Place |
|---|---|---|
| NEELAKARI MAHINDRAKAR ASSOCIATES | 002459S | Hubli |

**ವಿಷಯ 16 : ವಸೂಲಾತಿಯಾಗದ ಸುಸ್ತಿ ಸಾಲಗಳ ಪರಿಶೀಲನೆ ಹಾಗೂ ಅನುಮೋದನೆ.**

